ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮೇ 03, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 352 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ಮೋದಿಗೆ ಎದುರಾಳಿ ಇಲ್ಲ, 'ಇಂಡಿಯಾ' ಒಕ್ಕೂಟಕ್ಕೆ ನಾಯಕರಿಲ್ಲ

### ಹರಪನಹಳ್ಳಿ : ಬಿಜೆಪಿ ಅಭ್ಯರ್ಥಿ ಪರ ಶೋಭಾ ರೋಡ್ ಶೋ



ಹರಪನಹಳ್ಳಿ, ಮೇ 2 - ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಅವರ ಪರವಾಗಿ ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಗುರುವಾರ ಪಟ್ಟಣದಲ್ಲಿ ಭರ್ಜರಿ ರೋಡ್ ಶೋ ನಡೆಸುವ ಮೂಲಕ ಮತಯಾಚನೆ ಮಾಡಿದರು.

ಪಟ್ಟಣದ ಹರಿಹರ ವೃತ್ತದಿಂದ ಆರಂಭವಾದ ರೋಡ್ ಶೋ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಮೇಗಳಪೇಟೆಯ ಮುಖ್ಯ ರಸ್ತೆಯ ಮಾರ್ಗವಾಗಿ ಕೊಟ್ಟೂರು ಸರ್ಕಲ್‌ವರೆಗೂ ನಡೆಯಿತು.

ರೋಡ್ ಶೋ ಉದ್ದಕ್ಕೂ ಸಾವಿರಾರು ಬಿಜೆಪಿ ಕಾರ್ಯಕರ್ತರು ಮೋದಿ ಭಾವಚಿತ್ರ ಹಿಡಿದು, ಕೇಸರಿ ಶಾಲು ಧರಿಸಿ ಜೈಶ್ರೀರಾಮ್ ಘೋಷಣೆ ಕೂಗುತ್ತಾ ಸಾಗಿದರು.

ಈ ಸಂದರ್ಭದಲ್ಲಿ ಕೊಟ್ಟೂರು ಸರ್ಕಲ್ ಬಳಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಸಚಿವೆ ಶೋಭಾ ಕರಂದ್ಲಾಜೆ, ದೇಶದಲ್ಲಿ ಮೋದಿಗೆ ಎದುರಾಳಿ ಯಾರು ಇಲ್ಲ ಇಂಡಿಯಾ ಒಕ್ಕೂಟಕ್ಕೆ ನಾಯಕರೇ ಇಲ್ಲ. ಮೋದಿಯವರು ಪ್ರಧಾನಿಯಾದ ಮೇಲೆ ಕಳೆದ ಹತ್ತು ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಎಂದರು.

ಕಾಂಗ್ರೆಸ್‌ನವರು 60 ವರ್ಷದಲ್ಲಿ ಮಾಡದ ಅಭಿವೃದ್ಧಿ ಕೆಲಸಗಳನ್ನು ಕೇವಲ ಹತ್ತು ವರ್ಷದಲ್ಲಿ ಮೋದಿ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ, ವಿಮಾನ ನಿಲ್ದಾಣಗಳ ಆಧುನಿಕರಣ, ಉಜ್ವಲ ಯೋಜನೆ, ಕಿಸಾನ್ ಸಮ್ಮಾನ ಮಹಿಳಾ ಸಬಲೀಕರಣ, 28 ಸಾವಿರ ಹಳ್ಳಿಗಳಿಗೆ (3ನೇ ಪುಟಕ್ಕೆ)

## ನಗರದ ಖಾಸಗಿ ಬಸ್ ನಿಲ್ದಾಣದ ಅಭಿವೃದ್ಧಿಗೆ ಕ್ರಮ : ಸಚಿವ ಎಸ್ಸೆಸ್ಸೆಂ

### ಖಾಸಗಿ ಬಸ್ ಮಾಲೀಕರ - ಚಾಲಕರಿಂದ ಪ್ರಭಾಗೆ ಬೆಂಬಲ



ದಾವಣಗೆರೆ, ಮೆ. 1 - ಅಶೋಕ ರಸ್ತೆ, ಡಿಸಿಎಂ ರಸ್ತೆ, ಹದಡಿ ರಸ್ತೆಯಲ್ಲಿ ಸಂಚರಿಲು ಸವಾರರು ಭಯಪಡುವಂತಾಗಿದೆ ಎಂದು ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಸಂಸದ ಜಿ.ಎಂ. ಸಿದ್ದೇಶ್ವರ ವಿರುದ್ಧ ಕಿಡಿಕಾರಿದರು.

ನಗರದ ಖಾಸಗಿ ಬಸ್ ಮಾಲೀಕರ ಸಂಘ ಹಾಗೂ ಚಾಲಕರ ಸಂಘದಿಂದ ಹಮ್ಮಿಕೊಂಡಿದ್ದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸಭೆಯನ್ನುದ್ದೇಶಿಸಿ ಮಾತ ನಾಡಿದ ಅವರು ಅಶೋಕ ರಸ್ತೆ ಅವೈಜ್ಞಾನಿಕ ಕಾಮಗಾರಿಯಿಂದ ಕೂಡಿದ್ದು, ಡಿಸಿಎಂ ರಸ್ತೆ ಹಾವು ಸುತ್ತಿದ ಹಾಗೇ ಸುತ್ತಬೇಕು. ಹದಡಿ ರಸ್ತೆ ಆಕ್ಸಿಡೆಂಟ್ ಸ್ಪಾಟ್ ಆಗಿದೆ. ಈ ರೀತಿ ಸಂಸದರು ರಸ್ತೆಗಳ ಅಭಿವೃದ್ಧಿ ಮಾಡಿರುವರು ಎಂದು ದೂರಿದರು.

ದೇಶದಲ್ಲಿ ಶೇ. 80 ರಂದು ನಿರುದ್ಯೋಗ ಸಮಸ್ಯೆ ಇದೆ. ಜಪಾನ್ ಜರ್ಮನಿಯಂತೆ ಉದ್ಯೋಗ ಸೃಷ್ಟಿ ಮಾಡಬೇಕಿದೆ. ನಮ್ಮ ಸರ್ಕಾರ ನೀಡಿದ ಗ್ಯಾರೆಂಟಿ ಯೋಜನೆಗಳಿಂದ ಬಡ (3ನೇ ಪುಟಕ್ಕೆ)

## ದಕ್ಷಿಣದಲ್ಲಿ ತೀವ್ರ ತಾಪಮಾನ



ನವದೆಹಲಿ,ಮೇ 2 – ದೇಶದ ಪೂರ್ವ ಹಾಗೂ ದಕ್ಷಿಣ ಭಾಗಗಳಲ್ಲಿ ತಾಪಮಾನ ತೀವ್ರ ಹೆಚ್ಚಳವಾಗಿದೆ. ಮೇ 6ರವರೆಗೆ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲು ಕೇರಳ ಸರ್ಕಾರ ಆದೇಶಿಸಿದೆ.

ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ, ತಮಿಳುನಾಡು, ತೆಲಂಗಾಣ ಹಾಗೂ ಆಂಧ್ರ ಪ್ರದೇಶ ಕರಾವಳಿಯಲ್ಲಿ ತೀವ್ರ ಬಿಸಿ ವಾತಾವರಣ ಕಂಡು ಬಂದಿದೆ. ಕನಿಷ್ಠ 17 ಕಡೆ ತಾಪಮಾನ 44 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಆಂಧ್ರ ಪ್ರದೇಶದ ನಂದ್ಯಾಲ್‌ನಲ್ಲಿ (2ನೇ ಪುಟಕ್ಕೆ)

## ಜಾಮೀನಿಗಾಗಿ ರೇವಣ್ಣ ಅರ್ಜಿ

ಬೆಂಗಳೂರು, ಮೇ 3 - ಸಂಸದ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದಲ್ಲಿ ಜಾಮೀನು ನೀಡುವಂತೆ ಶಾಸಕ ಹೆಚ್.ಡಿ. ರೇವಣ್ಣ ಅವರು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ (6ನೇ ಪುಟಕ್ಕೆ)

|| ಶ್ರೀ ಸೋಗಿ ವೀರಭದ್ರೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 16.06.1946
ಮರಣ : 29.04.2024

ದಾವಣಗೆರೆ ಸಿಟಿ ಎಂ.ಸಿ.ಸಿ. 'ಎ'ಬ್ಲಾಕ್ ವಾಸಿಗಳಾದ
ಶ್ರೀಮತಿ ಬೆಳ್ಳೂಡಿ ಶ್ರೀ ಸುವರ್ಣಮ್ಮ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿ. : 29.04.24ನೇ ಸೋಮವಾರ ಬೆಳಿಗ್ಗೆ 11ಗಂಟೆಗೆ ನಮ್ಮ ಪೂಜ್ಯ ಪತಿಯವರಾದ
ಶ್ರೀಯಜಮಾನ್ ಬೆಳ್ಳೂಡಿ ವೀರಣ್ಣನವರು
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿ. : 03.05.24ನೇ ಶುಕ್ರವಾರ ಮಧ್ಯಾಹ್ನ 12.15ಗಂಟೆಗೆ
#67/3, ಮುದ್ದಳ್ಳಿ ತೋಟ, ಚರ್ಚ್ ಹಿಂಭಾಗ, ಎಂಸಿಸಿ 'ಎ' ಬ್ಲಾಕ್
ದಾವಣಗೆರೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಮಕ್ಕಳು, ಸೊಸೆಯಂದಿರು,
ಮೊಮ್ಮಕ್ಕಳು, ಮುದ್ದಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ : 9972285497, 9341001526, 9448119815

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.

ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ವಿ.ಎಸ್. ಅರುಣಾಚಲಶೆಟ್ರು
ವಕೀಲರು, ಹಿರಿಯ ಲೆಕ್ಕ ಪರಿಶೋಧಕರು ಮತ್ತು
ಸಂಸ್ಥಾಪಕ ಅಧ್ಯಕ್ಷರು, ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ, ಆವೋಪ,
ವಾಸವಿ ಅಭಿವೃದ್ಧಿ ಸಹಕಾರ ಸಂಘ ಹಾಗೂ ವಾಸವಿ ಕ್ಲಬ್ ಸಂಸ್ಥಾಪಕರು

ನೀವು ನಮ್ಮನ್ನಗಲಿ ಇಂದಿಗೆ ವರ್ಷವಾಯಿತು.
ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು
ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ತುಳಸಮ್ಮ ಅರುಣಾಚಲ ಶೆಟ್ರು ಮತ್ತು
ಶ್ರೀಮತಿ, ಶ್ರೀ ವಿ.ಎ. ಶ್ರೀಹರ್ಷ, ಆಡಿಟರ್ & ಟ್ಯಾಕ್ಸ್ ಕನ್ಸಲ್ಟೆಂಟ್
ಹಾಗೂ ಮಕ್ಕಳು, ಮೊಮ್ಮಕ್ಕಳು,
ಅಳಿಯಂದಿರು ಹಾಗೂ ಬಂಧು-ಮಿತ್ರರು.

## ಸಮೀಕ್ಷೆ ಹೆಸರಿನಲ್ಲಿ ಮತದಾರರ ವಿವರ ಪಡೆಯುವುದಕ್ಕೆ ತಡೆ

ನವದೆಹಲಿ, ಮೇ 2 – ಸಮೀಕ್ಷೆಗಳ ಹೆಸರಿನಲ್ಲಿ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಮತದಾರರ ವಿವರ ಪಡೆಯಲು ಪ್ರಯತ್ನ ನಡೆಸಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಚುನಾವಣಾ ಆಯೋಗ, ಈ ರೀತಿ ಮಾಹಿತಿ ಪಡೆಯುವುದು ಕಾನೂನಿಗೆ ವಿರುದ್ಧವಾಗಿದೆ ಎಂದು ಹೇಳಿದೆ.

ಚುನಾವಣೆ ನಂತರ ಯೋಜನೆಗಳ ಫಲಾನುಭವಿ ಮಾಡುವುದಾಗಿ ಹೇಳಿ ಕೆಲ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಆಯೋಗ ಹೇಳಿದೆ. ಪಕ್ಷಗಳು ಹಾಗೂ ಅಭ್ಯರ್ಥಿಗಳು ಈ ರೀತಿ ಮಾಹಿತಿ ಪಡೆಯುವುದನ್ನು ನಿಲ್ಲಿಸಬೇಕು ಎಂದು ಆಯೋಗ ತಿಳಿಸಿದೆ.


## ನಗರಕ್ಕೆ ನಾಳೆ ಸಿಎಂ ಸಿದ್ದರಾಮಯ್ಯ



ದಾವಣಗೆರೆ, ಮೇ 2 - ನಗರದ ಬಾಪೂಜಿ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 4ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕಾಂಗ್ರೆಸ್‌ನಲ್ಲಿರುವ ಕುರುಬ ಸಮಾಜದ ಮುಖಂಡರ ಸಭೆ ಕರೆಯಲಾಗಿದೆ ಎಂದು ಸಮಾಜದ ಮುಖಂಡ ಶಿವಕುಮಾರ್ ಒಡೆಯರ್ ತಿಳಿಸಿದ್ದಾರೆ. (2ನೇ ಪುಟಕ್ಕೆ)

|| ಶ್ರೀ ಆಂಜನೇಯ ಸ್ವಾಮಿಯೇ ನಮಃ ||

ಕೈಲಾಸ ಸಮಾರಾಧನೆ ಆಹ್ವಾನ



ಶ್ರೀ ಮಾರುತಿ ಬನ್ನಿಹಳ್ಳಿ
( AEE (R), PWD )
(ಜನನ : 24.05.1955 ಮರಣ : 26.04.2024)
ಶ್ರೀಮತಿ ಶೋಭಾ ಬನ್ನಿಹಳ್ಳಿ
# 2832, 4ನೇ ಮೇನ್, 3ನೇ ಕ್ರಾಸ್,
ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ನನ್ನ ಪೂಜ್ಯ ಪತಿದೇವರಾದ ಶ್ರೀ ಮಾರುತಿ ಬನ್ನಿಹಳ್ಳಿಯವರು
ದಿನಾಂಕ: 26.4.2024 ರಂದು ದೈವಾಧೀನರಾದರೆಂದು ತಿಳಿಸಲು
ವಿಷಾದಿಸುತ್ತೇವೆ. ಇದರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು
ದಿನಾಂಕ : 04.05.2024 ಶನಿವಾರದಂದು
ಮಧ್ಯಾಹ್ನ 12.00 ಘಂಟೆಗೆ (ಭೋಜನ " ಮಧ್ಯಾಹ್ನ 12.30ಕ್ಕೆ)
ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ತಾವುಗಳು ಸಕಾಲಕ್ಕೆ
ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಪತ್ನಿ, ತಮ್ಮಂದಿರು, ಮಕ್ಕಳು, ಅಳಿಯ ಮತ್ತು ಮೊಮ್ಮಕ್ಕಳು

## ಸಮಾಜ ಸೇವೆಯಿಂದ ರಾಜಕೀಯ ಕ್ಷೇತ್ರಕ್ಕೆ ಎಂಟ್ರಿ ಕೊಟ್ಟ 'ಅಭಿ ಕಾಟನ್' ಬಕ್ಕೇಶ್

ನಮ್ಮ ಜೀವನದ ನಿರ್ವಹಣೆಯೇ ಒಂದು ಸಾಹಸ ಎನ್ನುವ ಪ್ರಸ್ತುತ ದಿನಗಳಲ್ಲಿ ನಮ್ಮಂತೆ ಇತರರೂ ಚೆನ್ನಾಗಿರಬೇಕು ಎಂಬ ಸದುದ್ದೇಶದಿಂದ ಬಡ ಜನರಿಗೆ ನಮ್ಮ ಕೈಲಾದ ಸೇವೆ ಮಾಡಬೇಕೆನ್ನುವ ಹಂಬಲ ಹೊತ್ತಿರುವ ಕೆಲವೇ ಕೆಲವರಲ್ಲಿ **ಅಭಿ ಕಾಟನ್ ಬಕ್ಕೇಶ್** ಕೂಡಾ ಒಬ್ಬರು.

**ಅಭಿ ಕಾಟನ್ ಬಕ್ಕೇಶ್** ಎಂದೇ ಹೆಸರಾಗಿರುವ ಜವಳಿ ಉದ್ಯಮಿ **ನ್ಯಾಮತಿ ಬಕ್ಕೇಶ್** ಅವರು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಹೆಚ್ಚಾಗಿ ಕೇಳಿ ಬರುತ್ತಿರುವ ಕೆಲವೇ ಹೆಸರುಗಳಲ್ಲೊಬ್ಬರಾಗಿದ್ದಾರೆ.

**ಸಾಮಾಜಿಕ ಸೇವೆ :**

ದಾನಿಗಳ ನಗರಕ್ಕೆ ಮತ್ತೊಂದು ಹೆಸರಾಗಿರುವ ದಾವಣಗೆರೆ ಹಳೇಪೇಟೆಯ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ **'ಅಭಿ ಕಾಟನ್'** ಬಟ್ಟೆ ಅಂಗಡಿ ಮಾಲೀಕರಾಗಿರುವ **ಬಕ್ಕೇಶ್** ಅವರು ಜವಳಿ ಉದ್ಯಮ ಮತ್ತು ಪ್ರಾಮಾಣಿಕ ಹಾಗೂ ನಿಷ್ಠೆಗೆ ತಮ್ಮದೇ ಆದ ಹೆಸರು ಮಾಡುವುದರ ಮೂಲಕ ಬಟ್ಟೆ ವ್ಯಾಪಾರಸ್ಥರಿಗೆ ಕೀರ್ತಿ ತಂದಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

**'ಪರೋಪಕಾರಾರ್ಥಂ ಇದಂ ಶರೀರಂ'** (ಈ ಶರೀರ ಇರುವುದೇ ಪರರ ಸೇವೆಗಾಗಿ) ಎಂಬ ಸಂಸ್ಕೃತದ ವಾಕ್ಯದಂತೆ ಸಮಾಜ ಸೇವೆಯಲ್ಲಿ ತಮ್ಮ ತುಡಿತವನ್ನಿರಿಸಿಕೊಂಡಿರುವ ಬಕ್ಕೇಶ್ ಅವರು, ನಮ್ಮ ಜೀವನದ ಜೊತೆ-ಜೊತೆಗೆ ಇತರರೂ ಚೆನ್ನಾಗಿರಬೇಕು ಎನ್ನುವ ಮಹದಾಸೆಯಿಂದ ಬಡವರು, ಬಡ ಮಕ್ಕಳಿಗೆ ತಮ್ಮ ಕೈಲಾದ ಸೇವೆಯನ್ನು ಮಾಡುತ್ತಾ ಅದರಲ್ಲಿ ಸಂತೃಪ್ತಿ ಜೀವನ ಕಂಡುಕೊಂಡಿದ್ದಾರೆ.

ಹೀಗೆ ತಮ್ಮ ಜವಳಿ ಉದ್ಯಮದ ಜೊತೆಗೆ ಸಾಮಾಜಿಕ ಸೇವಾ ಕ್ಷೇತ್ರಕ್ಕೆ ಕಾಲಿಟ್ಟ ಬಕ್ಕೇಶ್ ಅವರು, ಜಗತ್ತನ್ನು ತಲ್ಲಣಗೊಳಿಸಿದ್ದ ಕೋವಿಡ್ ಸಂದರ್ಭದಲ್ಲಿ ನೂರಾರು ಜನರಿಗೆ ಆಹಾರದ ಕಿಟ್‌ಗಳನ್ನು ವಿತರಿಸಿದ್ದಾರೆ. ಕ್ರೀಡೆಗಳಿಗೆ, ಕ್ರೀಡಾಪಟುಗಳಿಗೆ ನಿರಂತರ ಸಹಾಯ ಧನ, ಬಹುಮಾನ ನೀಡುತ್ತಿದ್ದಾರೆ. ಬಡ ಮಕ್ಕಳಿಗೆ ಪ್ರತಿ ವರ್ಷ ವಿದ್ಯಾರ್ಥಿ ವೇತನ ಕೊಡುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಉಚಿತ ಟೈಲರಿಂಗ್, ಬ್ಯೂಟಿಷಿಯನ್ ತರಬೇತಿ ಕೊಡಿಸುವುದರೊಂದಿಗೆ ಅವರ ಬದುಕಿಗೆ ನೆರಳಾಗುವ ಪ್ರಯತ್ನ ಮಾಡುತ್ತಿದ್ದಾರೆ.

ಅಲ್ಲದೇ, ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನೆರವು ನೀಡಿದ್ದಾರೆ. ಕುರುವತ್ತಿಯ ಶ್ರೀ ಬಸವೇಶ್ವರ ರಥೋತ್ಸವದಲ್ಲಿ ಭಾಗವಹಿಸುವ ಸುಮಾರು 8 ಸಾವಿರ ಭಕ್ತರಿಗೆ ದಾಸೋಹವನ್ನು ಪ್ರತಿವರ್ಷವೂ ನೆರವೇರಿಸುತ್ತಿದ್ದಾರೆ. ಹೀಗೆ ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ನಿರಂತರ ಸಹಕಾರ ನೀಡುವಲ್ಲಿ ಬಕ್ಕೇಶ್ ಅವರ ಬಲಗೈ ಸದಾ ಮುಂದಾಗಿರುತ್ತದೆ.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ (ಕೂಡಲ ಸಂಗಮ)ದ ರಾಜ್ಯ ಯುವ ಘಟಕದ ಉಪಾಧ್ಯಕ್ಷರಾಗಿ, ಸಂಕಲ್ಪ ಫೌಂಡೇಷನ್ ಸೇವಾ ಸಂಸ್ಥೆ ಸೇರಿದಂತೆ ಹಲವಾರು ಸಾಮಾಜಿಕ ಸೇವಾ ಸಂಸ್ಥೆಗಳು, ವಿವಿಧ ದೇವಸ್ಥಾನಗಳ ಸಮಿತಿಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿದ್ದಾರೆ. ಒಟ್ಟಿನಲ್ಲಿ ಕಳೆದ 8-10 ವರ್ಷಗಳಿಂದ ಸಮಾಜ ಸೇವೆಯಲ್ಲಿ ನಿರತರಾಗಿರುವ ಬಕ್ಕೇಶ್, ಈ ಸೇವೆಯೇ ದೇವರ ಸೇವೆ ಎಂದುಕೊಂಡಿದ್ದು, ಇದರಿಂದ ಸಂತೃಪ್ತಿ, ನೆಮ್ಮದಿ ಕಂಡುಕೊಂಡಿದ್ದೇನೆ ಎಂದು ಸಂತಸ ವ್ಯಕ್ತಪಡಿಸುತ್ತಾರೆ.

**ರಾಜಕೀಯಕ್ಕೆ ಎಂಟ್ರಿ :**

ಇಂದಿನ ದಿನಗಳಲ್ಲಿ ಅವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡವರಿಗೆ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಆರೋಗ್ಯ ಚೆನ್ನಾಗಿದ್ದರೆ ಕಷ್ಟಪಟ್ಟು ಜೀವನ ಮಾಡಬಹುದು ಎನ್ನುವ ಸದುದ್ದೇಶದಿಂದ ಬಡವರಿಗೆ ಉತ್ತಮ ಆರೋಗ್ಯ ಕಲ್ಪಿಸಲು ಹಿಂದುಳಿದ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಮಾತ್ರೆ ನೀಡುವ ಉದ್ದೇಶವನ್ನಿಟ್ಟುಕೊಂಡಿದ್ದೇನೆ. 'ಜನ ಸೇವೆಯೇ ಜನಾರ್ಧನ ಸೇವೆ' ಎನ್ನುವ ನಿಟ್ಟಿನಲ್ಲಿ ನನ್ನ ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ರಾಜಕೀಯ ಕ್ಷೇತ್ರ ಸಹಕಾರಿಯಾಗಬಲ್ಲದು ಎಂಬ ಅಭಿಮತದೊಂದಿಗೆ ಈ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದೇನೆ ಎನ್ನುತ್ತಾರೆ ಬಕ್ಕೇಶ್.

**ಯಾವ ಪಕ್ಷದಲ್ಲಿ ಮೊದಲು ಗುರುತಿಸಿಕೊಂಡಿದ್ದು ? :**

ಈವರೆಗೂ ಯಾವ ಪಕ್ಷದಲ್ಲೂ ಅಧಿಕೃತವಾಗಿ ಗುರುತಿಸಿಕೊಂಡಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ನನ್ನ ಸ್ನೇಹಿತರು, ಸಂಬಂಧಿಕರಿದ್ದ ಕಾರಣ ಅವರ ಬೆನ್ನೆಲುಬಾಗಿ ನಿಂತು ಸಹಾಯ ಮಾಡಿರುತ್ತೇನೆ. ವೈಯಕ್ತಿಕವಾಗಿ ಯಾವ ಪಕ್ಷದಲ್ಲೂ ಇರಲಿಲ್ಲ. ಈ ತನಕವೂ ಪಕ್ಷಾತೀತ ಮತ್ತು ಜಾತ್ಯಾತೀತವಾಗಿ ಸಮಾಜ ಸೇವೆ ಮಾಡಿಕೊಂಡು ಬಂದಿದ್ದೇನೆ. ಇದೇ ಮೊದಲ ಬಾರಿಗೆ ರಾಜಕೀಯ ಪಕ್ಷವೊಂದಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿದ್ದೇನೆ ಎಂದು ಅವರು ತಿಳಿಸಿದ್ದಾರೆ.

**ಕಾಂಗ್ರೆಸ್ ಪಕ್ಷವನ್ನೇ ಆಯ್ಕೆ ಮಾಡಿಕೊಂಡಿರುವ ಉದ್ದೇಶವೇನು ? :**

ಬಡವರ ಪಾಲನೆಯೇ ನನ್ನುಸಿರು ಎಂದುಕೊಂಡಿರುವ ನನಗೆ ; ಅತೀ ಹೆಚ್ಚು ಬಡವರು ಇಷ್ಟಪಡುವ ಮತ್ತು ಜಾತ್ಯಾತೀತವಾಗಿರುವ ಹಾಗೂ ಸಮಾನತೆಗೆ ಆದ್ಯತೆಯನ್ನು ಕೊಡುವ ಪಕ್ಷ ಕಾಂಗ್ರೆಸ್ ಮಾತ್ರ. ಈ ಪಕ್ಷದೊಂದಿಗೆ ಗುರುತಿಸಿಕೊಂಡಲ್ಲಿ ನಾನು ನಂಬಿರುವ ತತ್ವಾದರ್ಶಗಳಿಗೆ ಮನ್ನಣೆ ಸಿಗಬಹುದು ಎಂಬ ಸದುದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದು ಬಕ್ಕೇಶ್ ಸಮರ್ಥಿಸಿಕೊಳ್ಳುತ್ತಾರೆ.

ಜೊತೆಗೆ, ಎಲ್ಲಾ ಜಾತಿ-ಧರ್ಮದವರಿಗೆ, ಸಹಾಯ ಕೇಳಿ ಬಂದವರಿಗೆ ಯಾವತ್ತೂ ಬರೀಗೈಲಿ ವಾಪಾಸ್ ಕಳುಹಿಸದೇ ತಮ್ಮ ಕೈಲಾದ ನೆರವು ನೀಡುತ್ತಿರುವ ; 'ಅಜಾತ ಶತ್ರು' ಎಂದು ಎಲ್ಲಾ ಪಕ್ಷಗಳಿಂದ ಮತ್ತು ಸರ್ವ ಜನಾಂಗದವರಿಂದ ಗುರುತಿಸಿಕೊಂಡಿರುವ ಹಿರಿಯರಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಮತ್ತು ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರುಗಳ ಆದರ್ಶಗಳಿಗೆ ಪ್ರೇರಣೆಯಾಗಿ, ಅವರ ನೇತೃತ್ವದಲ್ಲಿ ಅವರಿರುವ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಳ್ಳಲು ಮತ್ತೊಂದು ಕಾರಣವಾಯಿತು ಎನ್ನುತ್ತಾರೆ ಬಕ್ಕೇಶ್.

ಒಟ್ಟಾರೆಯಾಗಿ ಜವಳಿ ಉದ್ಯಮದ ಕಾಯಕದೊಂದಿಗೆ ಮಾಡುತ್ತಿದ್ದ ಸಮಾಜ ಸೇವೆಯಿಂದ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿರುವ ಅಭಿ ಕಾಟನ್ ಬಕ್ಕೇಶ್ ಅವರ ಅಶೋತ್ತರಗಳು ಈಡೇರಲಿ ಎಂಬುದೇ ನಮ್ಮ ಮಹಾದಾಸೆ.

– ಹಿತೈಷಿ



ನ್ಯಾಮತಿ ಬಕ್ಕೇಶ್
ಮಾಲೀಕರು,
ಅಭಿ ಕಾಟನ್,
ಕಾಳಿಕಾದೇವಿ ರಸ್ತೆ, ದಾವಣಗೆರೆ

- ರಾಜ್ಯ ಉಪಾಧ್ಯಕ್ಷರು: ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಯುವ ಘಟಕ, ಕೂಡಲಸಂಗಮ.
- ಅಧ್ಯಕ್ಷರು: ಕುರುವತ್ತಿ ಶ್ರೀ ಬಸವೇಶ್ವರ ಪಾದಯಾತ್ರೆ ಸಮಿತಿ, ದಾವಣಗೆರೆ.
- ಅಧ್ಯಕ್ಷರು: ಶ್ರೀ ಅಶ್ವತ್ಥನಾರಾಯಣ ದೇವಸ್ಥಾನ ಸಮಿತಿ, ಎಂ.ಬಿ.ಕೆರೆ, ದಾವಣಗೆರೆ.
- ಅಧ್ಯಕ್ಷರು: ಶ್ರೀ ಅಡವಯ್ಯನ ದೇವಸ್ಥಾನದ ಸಮಿತಿ, ಬೆಳ್ಳೂಡಿಗಲ್ಲಿ, ದಾವಣಗೆರೆ.
- ಸದಸ್ಯರು: ಶ್ರೀ ಕಟ್ಟೆ ದುರ್ಗಮ್ಮನ ದೇವಸ್ಥಾನ ಸಮಿತಿ, ಹೊಂಡದ ರಸ್ತೆ, ದಾವಣಗೆರೆ.
- ಸದಸ್ಯರು: ಸಂಕಲ್ಪ ಸೇವಾ ಫೌಂಡೇಷನ್, ಎಂ.ಸಿ.ಸಿ. 'ಎ' ದಾವಣಗೆರೆ.



ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಾಮನೂರು ಮಲ್ಲಿಕಾರ್ಜುನ್ ಅವರು ಅಭಿ ಕಾಟನ್ ಬಕ್ಕೇಶ್ ಅವರ ನಿವಾಸಕ್ಕೆ ಭೇಟಿ ನೀಡಿದ್ದ ಸಂದರ್ಭದ ಚಿತ್ರ.

# ಹರಿಹರ ನಗರಕ್ಕೆ ಇಂದು ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್




ಹರಿಹರ, ಮೇ 2- ಇದೇ ದಿನಾಂಕ 7 ರಂದು ನಡೆಯುವ ದಾವಣಗೆರೆ ಲೋಕಸಭಾ ಚುನಾವಣೆಯ ಪ್ರಚಾರದ ಅಂಗವಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನಾಳೆ ದಿನಾಂಕ 3 ರ ಶುಕ್ರವಾರ ಸಂಜೆ 6 ಗಂಟೆಗೆ ಹರಿಹರ ನಗರದಲ್ಲಿ ಬೃಹತ್ ರೋಡ್ ಶೋ ಮಾಡಲಿದ್ದಾರೆ ಎಂದು ಮಾಜಿ ಶಾಸಕ ಎಸ್.ರಾಮಪ್ಪ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್ ತಿಳಿಸಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಗರದ ಪಕ್ಕೀರಸ್ವಾಮಿ ಮಠದ ಆವರಣದಿಂದ ಬೃಹತ್ ರೋಡ್ ಶೋ ಆರಂಭಗೊಂಡು, ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಗಾಂಧಿ ವೃತ್ತದ ಮೂಲಕ ಸಂಚರಿಸಿ, ತುಂಗಭದ್ರಾ ನದಿಯ ಹತ್ತಿರದ ನಾಡ್ ಬಂದ್ ಷಾವಲಿ ದರ್ಗಾದ ಆವರಣಕ್ಕೆ ಅಂತ್ಯಗೊಳ್ಳಲಿದೆ.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ತಾಲ್ಲೂಕಿನ ಬೈರನಪಾದ ನೀರಾವರಿ ಯೋಜನೆ, ಹರಿಹರ ನಗರಕ್ಕೆ ಶಾಶ್ವತ ಕುಡಿಯುವ ನೀರಿನ ಘಟಕ ಸ್ಥಾಪನೆ, ಸಾರಥಿ ಬಳಿ ಕೈಗಾರಿಕಾ ಕೇಂದ್ರ, ಸೇರಿದಂತೆ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ

## ಬೃಹತ್ ರೋಡ್ ಶೋ

ಈಗಾಗಲೇ ಜಿಲ್ಲೆಯ ಉಸ್ತುವಾರಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ ರವರೆಗೆ ಹಲವು ಬಾರಿ ಗಮನಕ್ಕೆ ತಂದಾಗ ಅವರು ಕೂಡ ಎಲ್ಲಾ ಕೆಲಸಗಳಿಗೆ ಸಹಮತ ವ್ಯಕ್ತಪಡಿಸಿದ್ದು, ಶೇ.60 ರಷ್ಟು ಕಾಗದ ಪತ್ರಗಳ ಸಿದ್ದತೆ ನಡೆದಿದ್ದು, ಇನ್ನೂ ಕೆಲವೆ ದಿನಗಳಲ್ಲಿ ತಾಲ್ಲೂಕಿನ ಅನೇಕ ಸಮಸ್ಯೆಗಳನ್ನು ಇತ್ಯರ್ಥಕ್ಕೆ ಬರುತ್ತವೆ ಎಂದು ಹೇಳಿದರು.

ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಭಾರೀ ಬಹುಮತದೊಂದಿಗೆ ಗೆಲ್ಲುತ್ತಾರೆ ಎಂಬ ವಿಶ್ವಾಸವನ್ನು ಹೊಂದಿದ್ದು, ಈ ಬಾರಿ ಅವರಿಗೆ ತಾಲ್ಲೂಕಿನಿಂದ ಸುಮಾರು 15-20 ಸಾವಿರ ಲೀಡ್ ಕೊಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಸುರೇಶ್ ಹಾದಿಮನಿ, ಬಿ.ರೇವಣಸಿದ್ದಪ್ಪ, ಮಹಮ್ಮದ್ ಪೈರೋಜ್, ಮಾಜಿ ನಗರಸಭೆ ಸದಸ್ಯ ಹಬೀಬ್‌ಉಲ್ಲಾ, ದಾದಾಪೀರ್ ಭಾನುವಳ್ಳಿ, ಇಸ್ಮಾಯಿಲ್, ಶಶಿಕಾಂತ್ ರೆಡ್ಡಿ ಇತರರು ಹಾಜರಿದ್ದರು.

# ಈ ಬಾರಿ 400 ಸ್ಥಾನಗಳ ಗಡಿದಾಟುವ ಗುರಿ ನಮ್ಮದು

## ಮಲೇಬೆನ್ನೂರಿನಲ್ಲಿ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ವಿಶ್ವಾಸ

ಮಲೇಬೆನ್ನೂರು, ಮೇ 2- ಈ ಬಾರಿ 400 ಗಡಿ ದಾಟುವ ಗುರಿಯನ್ನು ಎನ್‌ಡಿಎ ಹೊಂದಿದ್ದು, ಇದರಲ್ಲಿ ದಾವಣಗೆರೆ ಕ್ಷೇತ್ರದ ಗಾಯಿತ್ರಿ ಸಿದ್ದೇಶ್ವರ ಕೂಡಾ ಇರಬೇಕೆಂದು ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಹೇಳಿದರು.



ಅವರು, ಗುರುವಾರ ಸಂಜೆ ಮಲೇಬೆನ್ನೂರು ಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಪರ ಬೃಹತ್ ರೋಡ್ ಶೋ ಮೂಲಕ ಮತಯಾಚನೆ ಮಾಡಿ, ಮುಖ್ಯವೃತ್ತದಲ್ಲಿ ಚುನವಣಾ ಭಾಷಣ ಮಾಡಿದರು.

ದಾವಣಗೆರೆ ಕ್ಷೇತ್ರದಲ್ಲೂ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಅವರ ಬೆಂಬಲದಿಂದ ನಮ್ಮ ಶಕ್ತಿ ಡಬಲ್ ಆಗಿದ್ದು, ಗಾಯಿತ್ರಿ ಸಿದ್ದೇಶ್ವರ ಗೆಲುವು ನಿಶ್ಚಿತವಾಗಿದೆ ಎಂದು ಶೋಭಾ ಕರಂದ್ಲಾಜೆ ಅವರು, ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಪ್ರಧಾನಿ ಮೋದಿ ಅವರಿಂದಾಗಿ ವಿದೇಶಗಳಲ್ಲಿ ಭಾರತಕ್ಕೆ ಗೌರವ ಹೆಚ್ಚಾಗಿದೆ.

ದೇಶದಲ್ಲಿ ಹಿಂದೆಂದೂ ಆಗದಷ್ಟು ಅಭಿವೃದ್ಧಿಗಳಾಗಿವೆ. ರೈಲ್ವೆ, ಏರ್‌ಪೋರ್ಟ್ ಹೀಗೆ ಸಾಕಷ್ಟು ಸುಧಾರಣೆಯಾಗಿದ್ದು, ದೇಶದ ರೈತನಿಗೆ ಗೌರವ ಕೊಡಲಾಗಿದೆ. ಜಲಜೀವನ್ ಮೂಲಕ ದೇಶದ ಜನರಿಗೆ ಶುದ್ಧ ಕುಡಿಯುವ ನೀರು ತಲುಪಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಶೋಭಾ ಕರಂದ್ಲಾಜೆ ತಿಳಿಸಿದರು.

ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಪಾಕಿಸ್ತಾನ್ ಜಿಂದಾಬಾದ್ ಎನ್ನುವವರನ್ನು ಮತ್ತು ಶ್ರೀರಾಮ ಮಂದಿರ ನಿರ್ಮಾಣಕ್ಕೆ ತಡೆದವರನ್ನು ಈ ಚುನಾವಣೆಯಲ್ಲಿ ತಿರಸ್ಕರಿಸಿ, ದೇಶ, ಧರ್ಮ, ಸಂಸ್ಕೃತಿ, ಪರಂಪರೆ ಕಾಪಾಡುವ ಮೋದಿಯವರನ್ನು ಬೆಂಬಲಿಸಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ದೇಶದ ನಿಜವಾದ ಸೇವಕ ಮೋದಿ ಅವರನ್ನು ದೇವೇಗೌಡ್ರು, ಕುಮಾರಸ್ವಾಮಿಯವರು ಬೆಂಬಲಿಸಿದ ಕ್ಷಣದಿಂದ ನಾವೂ ಜಿಲ್ಲೆಯಲ್ಲಿ ಬೆಂಬಲ ಕೊಟ್ಟು ಗಾಯಿತ್ರಿ ಸಿದ್ದೇಶ್ವರ ಗೆಲುವಿಗೆ ಹಗಲಿರುಳು ಶ್ರಮಿಸುತ್ತಿದ್ದೇವೆ.

ಕಾಂಗ್ರೆಸ್‌ನವರು ನಮ್ಮ ಅಭ್ಯರ್ಥಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪನವರೂ ಕಡಿಮೆ ಓದಿ ಎಂಎಲ್‌ಎ, ಎಂ.ಪಿ ಸಚಿವರಾಗಿದ್ದಾರೆ ಎಂದವರು ಹೇಳಿದರು.

ಈ ದೇಶ ಕಟ್ಟಿದವರು, ಪರಂಪರೆ ಉಳಿಸಿದವರು ಬರೀ ಶಿಕ್ಷಣವಂತರಲ್ಲ ಎಂಬುದನ್ನು ಕಾಂಗ್ರೆಸ್‌ನವರು ಅರ್ಥಮಾಡಿಕೊಳ್ಳಬೇಕು. ಸೇವೆ ಮಾಡುವ ಮನಸ್ಸು ಬಹಳ ಮುಖ್ಯ. ಅಂತಹ ಮನಸ್ಸು ಗಾಯಿತ್ರಿ ಸಿದ್ದೇಶ್ವರ ಅವರಿಗಿದೆ ಎಂದರು.

ಮೊನ್ನೆ ದಾವಣಗೆರೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬಂದಾಗ ಅವರ ಕೈ ಕುಲುಕಿದ ಮೇಲೆ ನನಗೂ 'ಪವಾರ್' ಬಂದಿದೆ. ಜೆಡಿಎಸ್ ಬೆಂಬಲದಿಂದ ದಾವಣಗೆರೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿಕೊಂಡು ಬನ್ನಿ ಎಂದು ಮೋದಿ ನಮಗೆ ಹೇಳಿದ್ದಾರೆ. ಆ ಪ್ರಕಾರ ನಾವು ಶ್ರಮವಹಿಸಿ ಕೆಲಸ ಮಾಡುತ್ತಿದ್ದು, ಎರಡೂ ಪಕ್ಷಗಳ ಕಾರ್ಯಕರ್ತರು ಒಂದಾಗಿ ದುಡಿಯಿರಿ ಎಂದು ಶಿವಶಂಕರ್ ಮನವಿ ಮಾಡಿದರು.

ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಮಾತನಾಡಿ, ದೇಶದ ಜವಾಬ್ದಾರಿ ಜನರ ಮೇಲಿದ್ದು, ಮೇ 7 ರಂದು ಬಿಜೆಪಿಗೆ ಮತ ಹಾಕಿ ಮೋದಿಯನ್ನು ಬೆಂಬಲಿಸಿ, ನನ್ನನ್ನು ಅಧಿಕ ಮತಗಳಿಂದ ಗೆಲ್ಲಿಸಿ, ಜಿಲ್ಲೆಯ ಅಭಿವೃದ್ಧಿಗೆ ಕೈ ಜೋಡಿಸಿ ಎಂದು ಕೋರಿದರು.

ವಿಧಾನ ಪರಿಷತ್ ಸದಸ್ಯರಾದ ಭಾರತಿ ಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಜಿ.ಪಂ. ಮಾಜಿ ಸದಸ್ಯ ಸಿ.ಎನ್.ವೀರಭದ್ರಪ್ಪ, ತಾ. ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಪರಮೇಶ್ವರಪ್ಪ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಐರಣಿ ಅಣ್ಣಪ್ಪ, ಜೆಡಿಎಸ್ ಮುಖಂಡ ಸಿರಿಗೆರೆ ಪರಮೇಶ್ವರಗೌಡ, ಜಿಗಳಿಯ ಕೆ.ಆರ್.ರಂಗಪ್ಪ, ಮುದ್ದಪ್ಪ ಮಂಜುನಾಥ್, ಜಿ.ಪಿ. ಮಂಜುನಾಥ್, ಡಾ. ಎನ್.ನಾಗರಾಜ್, ಕೊಕ್ಕನೂರು ಆಂಜನೇಯ ಪಾಟೀಲ್, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಓ.ಜಿ.ಕುಮಾರ್, ಜಿಗಳೇರ ಹಾಲೇಶಪ್ಪ, ಭೋವಿ ಮಂಜಣ್ಣ, ಕೆ.ಜಿ.ಮಂಜುನಾಥ್, ಎಂ.ಆರ್.ಮಹಾದೇವಪ್ಪ, ಪಾನಿಪೂರಿ ರಂಗನಾಥ್, ಬೆಣ್ಣೆಹಳ್ಳಿ ಬಸವರಾಜ್, ಓ.ಜಿ.ಧನು, ಬಟ್ಟೆ ಅಂಗಡಿ ವಿಶ್ವ, ಕುಂಬಳೂರಿನ ಎನ್.ಲೋಕೇಶ್, ಕೊಮಾರನಹಳ್ಳಿ ಸುನೀಲ್, ಹರಿಹರ ನಗರ ಜೆಡಿಎಸ್ ಅಧ್ಯಕ್ಷ ಅಡಿಕೆ ಕುಮಾರ್, ಆದಾಪುರ ವಿಜಯಕುಮಾರ್, ಹುಗ್ಗಿ ಅಡಿವೇಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಹರಹರ ಕ್ಷೇತ್ರದಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಪರ ಮಾಧುಸ್ವಾಮಿ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಇಂದು ಮತಯಾಚಿಸಲಿದ್ದಾರೆ.

ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಳಗ್ಗೆ 10 ಕ್ಕೆ ಎಕ್ಕೆಗೊಂದಿ, 10.30 ಕ್ಕೆ ನಂದಿತಾವರೆ, 11 ಕ್ಕೆ ಜಿಗಳಿ, 11.30 ಕ್ಕೆ ಬಸಾಪುರ, 12 ಕ್ಕೆ ಬೇವಿನಹಳ್ಳಿ, 12.30 ಕ್ಕೆ ಹಳ್ಳಿಹಾಳ್ , 1 ಕ್ಕೆ ಕೊಕ್ಕನೂರು, 1.30 ಕ್ಕೆ ಹಿಂಡಸಘಟ್ಟ, 2 ಕ್ಕೆ ಗೋವಿನಹಾಳ್, 2.30 ಕ್ಕೆ ಮೂಗಿನಗೊಂದಿ, 3ಕ್ಕೆ ನಂದಿಗುಡಿ, 3.30 ಕ್ಕೆ ಉಕ್ಕಡಗಾತ್ರಿ, 4ಕ್ಕೆ ವಾಸನ, 4.30 ಕ್ಕೆ ಪಾಳ್ಯ, 5 ಕ್ಕೆ ಕಡರನಾಯಕನಹಳ್ಳಿ ವ್ಯಾಪ್ತಿಯಲ್ಲಿ ಅವರು ಪ್ರಚಾರ ಮಾಡಲಿದ್ದಾರೆ. ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಅವರೊಂದಿಗೆ ಬಿಜೆಪಿ ಪರ ಪ್ರಚಾರ ಮಾಡುವುರೆಂದು ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ತಾ. ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ ತಿಳಿಸಿದ್ದಾರೆ.

## ನಾಳೆ ಕುರುಬ ಸಮಾಜದ ಕಾಂಗ್ರೆಸ್ ಕಾರ್ಯಕರ್ತರ ಸಭೆ



ಹೊನ್ನಾಳಿ, ಮೇ 2- ಜಿಲ್ಲೆಯ 8 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುರುಬ ಸಮಾಜದ ಕಾರ್ಯಕರ್ತರ ಸಭೆಯನ್ನು ನಾಳೆ ದಿನಾಂಕ 4ರ ಶನಿವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಬಾಪೂಜಿ ಸಮುದಾಯ ಭವನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಹೊನ್ನಾಳಿ ಕುರುಬ ಸಮಾಜದ ಮುಖಂಡರಾದ ಅರಾಕ್ ಸಿದ್ದಪ್ಪ ಹೇಳಿದರು.

ಹೊನ್ನಾಳಿಯಲ್ಲಿ ಇಂದು ಜಿಲ್ಲಾ ಕುರುಬ ಸಮಾಜದ ಕಾಂಗ್ರೆಸ್ ಕಾರ್ಯಕರ್ತ ಮುಖಂಡರ ಸಭೆಯನ್ನುದ್ದೇಶಿಸಿ, ಮಾತನಾಡಿದರು.

ಈ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷ ಮುಖಂಡ ಹೆಚ್.ಎಂ. ರೇವಣ್ಣ ಆಗಮಿಸಲಿದ್ದು, ಸಭೆಯ ಅಧ್ಯಕ್ಷತೆಯನ್ನು ಶಿವಕುಮಾರ್ ಒಡೆಯರ್ ವಹಿಸಲಿದ್ದು, ಪಕ್ಷದ ಅಭ್ಯರ್ಥಿಯ ಗೆಲುವಿನ ಬಗ್ಗೆ ಚರ್ಚಿಸಲಾಗುವುದೆಂದರು.

ದಾವಣಗೆರೆ ಚಂದ್ರಶೇಖರ್ ಒಡೆಯರ್, ಶಿವಕುಮಾರ್ ಒಡೆಯರ್, ಆನಂದಪ್ಪ, ಲಿಂಗಣ್ಣ, ದಿಳ್ಯಪ್ಪ, ಶಿವಣ್ಣ ಹೊನ್ನಾಳಿ ಶಿವಯೋಗಿ ಇನ್ನಿತರರಿದ್ದರು.

## ನ್ಯಾಮತಿ ತಾಲ್ಲೂಕು ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಎಂ.ಸುಧಾ ಆಯ್ಕೆ



ನ್ಯಾಮತಿ, ಮೇ 2 - ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಎಂ.ಸುಧಾ ಅವರು ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಬಸವರಾಜ ಬಾವಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಸುಧಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರ ಆಯ್ಕೆಯನ್ನು ಘೋಷಣೆ ಮಾಡಲಾಯಿತು ಎಂದು ಚುನಾವಣಾಧಿಕಾರಿ ಎಸ್.ಆರ್. ಗಿರಿಜಮ್ಮ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ಆರ್. ಜಗದೀಶ, ಉಪಾಧ್ಯಕ್ಷ ತಿಮ್ಮಪ್ಪ ಹಾಗೂ ಆಡಳಿತ ಮಂಡಳಿಯ ಸಂಘದ ಗೌರವಾಧ್ಯಕ್ಷ ಎಂ.ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಕೆ.ಎನ್.ಜ್ಞಾನೇಶ, ಖಜಾಂಚಿ ಜಿ.ಒ.ಅನ್ನಪೂರ್ಣಮ್ಮ, ತಿಮ್ಮಪ್ಪ, ಎಚ್. ಗೌರಮ್ಮ, ವೆಂಕಟೇಶನಾಯ್ಕ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಆರ್. ಸಂತೋಷ, ಕಾರ್ಯದರ್ಶಿ ಸಿದ್ದಪ್ಪ ಜಿಗಣಪ್ಪನವರ, ಬಸವರಾಜಪ್ಪ, ಪುರುಷೋತ್ತಮ ಹಾಗೂ ಅವಳಿ ತಾಲ್ಲೂಕಿನ ಶಿಕ್ಷಕರು ಶುಭಹಾರೈಸಿದರು.

## 2ಜಿ ಸ್ಪೆಕ್ಟ್ರಮ್ : ಸರ್ಕಾರದ ಮನವಿಗೆ ರಿಜಿಸ್ಟ್ರಿ ನಕಾರ

ನವದೆಹಲಿ, ಮೇ 2 - 2ಜಿ ಸ್ಪೆಕ್ಟ್ರಮ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2012ರಲ್ಲಿ ನೀಡಿದ ತೀರ್ಪಿನ ಬದಲಾವಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅರ್ಜಿಯನ್ನು ದಾಖಲಿಸಿಕೊಳ್ಳಲು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿ ನಿರಾಕರಿಸಲಾಗಿದೆ ಎನ್ನಲಾಗಿದೆ.

ಸ್ಪೆಕ್ಟ್ರಮ್ ರೀತಿಯ ಸಂಪನ್ಮೂಲಗಳನ್ನು ಹರಾಜಿನ ಮೂಲಕವೇ ವಿತರಿಸಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಈ ಬಗ್ಗೆ ಸ್ಪಷ್ಟನೆ ಕೇಳಿ ಕೇಂದ್ರ ಸರ್ಕಾರ ದಾಖಲಿಸಲು ಮುಂದಾಗಿತ್ತು. ಆದರೆ, ಸ್ಪಷ್ಟನೆ ಹೆಸರಿನಲ್ಲಿ ತೀರ್ಪಿನ ಮರು ಪರಿಶೀಲನೆಯ ಪ್ರಯತ್ನ ನಡೆಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿ ಭಾವಿಸಿದೆ. ರಿಜಿಸ್ಟ್ರಾರ್ ಆದೇಶದ ವಿರುದ್ಧ ಕೇಂದ್ರ ಸರ್ಕಾರ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ.

## ನಗರಕ್ಕೆ ನಾಳೆ ಸಿದ್ದರಾಮಯ್ಯ

**(1ನೇ ಪುಟದಿಂದ)** ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಹೆಚ್.ಎಂ. ರೇವಣ್ಣ ಸೇರಿ ಮತ್ತಿತರರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಲೋಕಸಭಾ ಚುನಾವಣೆ ಕುರಿತು ಚರ್ಚೆ ನಡೆಯಲಿದೆ ಎಂದು ಹೇಳಿದರು.

ಈ ಸಭೆಗೆ ಕಾಂಗ್ರೆಸ್ ಪಕ್ಷದಲ್ಲಿರುವ ಕುರುಬ ಸಮಾಜ ಮುಖಂಡರು, ಕಾರ್ಯಕರ್ತರು, ಮುಖ್ಯಮಂತ್ರಿಗಳ ಸಿದ್ದರಾಮಯ್ಯ ಅವರ ಹಿತೈಷಿಗಳು, ಅಭಿಮಾನಿಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಜಿ.ಸಿ. ನಿಂಗಪ್ಪ, ಎಸ್.ಎಲ್. ಆನಂದಪ್ಪ, ಲೋಕಿಕೆರೆ ಸಿದ್ದಪ್ಪ, ಹೆಚ್.ಬಿ. ಗೋಣೆಪ್ಪ, ಮುದಹದಡಿ ನಿಂಗಪ್ಪ ಮತ್ತಿತರರಿದ್ದರು.

## ದಕ್ಷಿಣದಲ್ಲಿ ತೀವ್ರ ತಾಪಮಾನ

**(1ನೇ ಪುಟದಿಂದ)** ತಾಪಮಾನ 46.2 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ತೆಲಂಗಾಣದ ಪಲ್ವಂಚದಲ್ಲಿ ತಾಪಮಾನ 44.3 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ.

ಈಗಿರುವ ಬಿಸಿ ಗಾಳಿಯ ಪ್ರಕೋಪ ಮೇ 3ರವರೆಗೆ ಮುಂದುವರೆಯಲಿದೆ. ನಂತರ ತಾಪಮಾನ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಮಂಡಕ್ಕಿ-ಮಿರ್ಚಿ ಸವಿದ ಪ್ರಭಾ, ಸೌಮ್ಯ ರೆಡ್ಡಿ



ಮಲೇಬೆನ್ನೂರು, ಮೇ 2- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಬುಧವಾರ ಕೊಮಾರನಹಳ್ಳಿಯ ಪ್ರಸಿದ್ದ ಮಧು ಮಂಡಕ್ಕಿ ಹೋಟೆಲ್‌ನಲ್ಲಿ ಮಂಡಕ್ಕಿ-ಮಿರ್ಚಿ ಸವಿದರು.

ಚುನಾವಣಾ ಪ್ರಚಾರಕ್ಕಾಗಿ ಹೊನ್ನಾಳಿಗೆ ತೆರಳುವ ಮಾರ್ಗ ಮಧ್ಯದಲ್ಲಿ ಕೊಮಾರನಹಳ್ಳಿಯ ಹೋಟೆಲ್ ಬಳಿ ನಿಂತಿದ್ದ ಜನರನ್ನು ಮಾತನಾಡಿಸಿ, ನಂತರ ಹೋಟೆಲ್ ಒಳಗಡೆ ಹೋಗಿ ಬಿಸಿ ಬಿಸಿ ಮಂಡಕ್ಕಿ-ಮಿರ್ಚಿ ತಿನ್ನುತ್ತಾ ಹೋಟೆಲ್ ಮಾಲೀಕ ಮಧು ಅವರೊಂದಿಗೆ ವ್ಯಾಪಾರದ ಬಗ್ಗೆ ಮಾಹಿತಿ ಪಡೆದರು.

ಇದೇ ದಿನ ಸಂಜೆ ಇದೇ ಹೋಟೆಲ್‌ಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯ ರೆಡ್ಡಿ ಅವರೂ ಆಗಮಿಸಿ, ಮಂಡಕ್ಕಿ-ಮಿರ್ಚಿ ಸವಿದು ಖುಷಿ ಪಟ್ಟರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎಸ್.ಎಂ.ಮಂಜುನಾಥ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಶ್ರೀಮಂತರ ಪರ ಇರುವ ಬಿಜೆಪಿಯನ್ನು ಎಂದಿಗೂ ನಂಬಬೇಡಿ

## ಜಿಗಳಿಯಲ್ಲಿ ಡಿಎಸ್‌ಎಸ್ ರಾಜ್ಯ ಸಂಚಾಲಕ ಹೆಗ್ಗೆರೆ ರಂಗಪ್ಪ ಮನವಿ



ಮಲೇಬೆನ್ನೂರು, ಮೇ 2- ಶ್ರೀಮಂತರ ಪರ ಆಡಳಿತ ನೀಡುವ ಬಿಜೆಪಿಯನ್ನು ಎಂದಿಗೂ ನಂಬಬೇಡಿ. ಬಡವರ, ರೈತರ, ಕಾರ್ಮಿಕರು ಸೇರಿದಂತೆ ಎಲ್ಲಾ ವರ್ಗಗಳ ಜನರ ಹಿತ ಕಾಪಾಡುವ ಕಾಂಗ್ರೆಸ್ ಅನ್ನು ಎಂದಿಗೂ ಕೈ ಬಿಡಬೇಡಿ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಹೆಗ್ಗೆರೆ ರಂಗಪ್ಪ ಹೇಳಿದರು.

ಅವರು, ಗುರುವಾರ ಹರಿಹರ ತಾಲ್ಲೂಕಿನ ಕುಂಬಳೂರು, ಜಿಗಳಿ, ಜಿ.ಬೇವಿನಹಳ್ಳಿ, ಹಳ್ಳಿಹಾಳ್, ಕೊಕ್ಕನೂರು, ಹಿಂಡಸಘಟ್ಟೆ, ಉಕ್ಕಡಗಾತ್ರಿ, ವಾಸನ, ಪಾಳ್ಯ, ಕೆ.ಎನ್.ಹಳ್ಳಿ, ಸಿರಿಗೆರೆ, ಭಾನುವಳ್ಳಿ ಗ್ರಾಮಗಳ ಎ.ಕೆ. ಕಾಲೋನಿಗಳಿಗೆ ತೆರಳಿ ಮತದಾನ ಕುರಿತು ಜನರಲ್ಲಿ ಜಾಗೃತಿ ಮೂಡಿಸಿ, ಜಿಗಳಿಯಲ್ಲಿ ಮಾತನಾಡಿದರು.

ಒಂದೇ ಒಂದು ಮತದಿಂದ ಎಂ.ಪಿ, ಎಂಎಲ್‌ಎ ಆಗಿದ್ದಾರೆ. ಒಂದೇ ಒಂದು ಮತದ ಕೊರತೆಯಿಂದಾಗಿ ದೇಶದಲ್ಲಿ ಪ್ರಧಾನಿ ಹುದ್ದೆ ಕಳೆದುಕೊಂಡಿರುವವರಿದ್ದಾರೆ. ಹಾಗಾಗಿ ಯಾರೂ ಮತದಾನದಿಂದ ದೂರ ಉಳಿಯದೇ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಬೇಕೆಂದು ಹೆಗ್ಗೆರೆ ರಂಗಪ್ಪ ಜನರಲ್ಲಿ ಮನವಿ ಮಾಡಿದರು.

ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ.ಬಸವರಾಜ್ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ನೀಡಿರುವ ಸಂವಿಧಾನ ಉಳಿಯಬೇಕಾದರೆ ಪ್ರತಿಯೊಬ್ಬರೂ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಬೇಕು.ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳು ಬಡವರ, ಮಧ್ಯಮ ವರ್ಗದವರ ಬದುಕಿಗೆ ಆಸರೆಯಾಗಿವೆ ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿ, ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಜಿಲ್ಲೆಯಲ್ಲಿ ಪಕ್ಷಾತೀತವಾಗಿ ಬೆಂಬಲ ಸಿಗುತ್ತಿದ್ದು, ಅವರ ಅಧಿಕ ಮತಗಳಿಂದ ಗೆಲ್ಲುತ್ತಾರೆ ಎಂದರು.

ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಹಾಗೂ ಗ್ರಾ.ಪಂ. ಮಾಜಿ ಅಧ್ಯಕ್ಷ ಎ.ಕೆ.ಅಡಿವೇಶ್ (ಹಾಲೇಶ್) ಮಾತನಾಡಿ, 400 ಸೀಟ್ ಗೆದ್ದರೆ ಬಿಜೆಪಿಯವರು ಸಂವಿಧಾನ ಬದಲಿಸುವ ಸಂಚು ರೂಪಿಸಿದ್ದು, ಈ ಬಗ್ಗೆ ಜನರು ಜಾಗೃತರಾಗಬೇಕೆಂದರು.

ಜಿಗಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ದೇವೇಂದ್ರಪ್ಪ, ಡಿಎಸ್‌ಎಸ್‌ನ ಬಾತಿ ಸಿದ್ದೇಶ್, ಚಿಕ್ಕನಹಳ್ಳಿ ಮಲ್ಲೇಶ್, ಗ್ರಾಮದ ಡಿ. ಮಂಜುನಾಥ್, ಎ.ಕೆ.ಜಯ್ಯಪ್ಪ, ಎ.ಕೆ.ರಂಗಪ್ಪ, ಸುರೇಶ್, ಚಂದ್ರಪ್ಪ, ಪ್ರಭಾಕರ್, ಶಶಿ, ಚೌಡಪ್ಪ, ಡಿ.ಬಸಣ್ಣ, ಬಾಲವ್ವರ ರಂಗಪ್ಪ, ಪೋಸ್ಟ್ ಮಂಜುನಾಥ್ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದ್ದರು.

## ಬ್ರಿಜ್ ಭೂಷಣ್ ಪುತ್ರನಿಗೆ ಬಿಜೆಪಿ ಟಿಕೆಟ್

ನವದೆಹಲಿ, ಮೇ 2 – ಉತ್ತರ ಪ್ರದೇಶದ ಕೈಸರ್‌ಗಂಜ್ ಕ್ಷೇತ್ರದಿಂದ ಬಿಜೆಪಿಯು ಕರಣ್ ಭೂಷಣ್ ಸಿಂಗ್ ಅವರನ್ನು ಕಣಕ್ಕಿಳಿಸಿದೆ. ಸಿಂಗ್ ಅವರು ಹಾಲಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಪುತ್ರ.

ಬ್ರಿಜ್ ಭೂಷಣ್ ಶರಣ್ ವಿರುದ್ಧ ಮಹಿಳಾ ಕುಸ್ತಿ ಪಟುಗಳು ಲೈಂಗಿಕ ಪೀಡನೆಯ ಆರೋಪ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ. ಆದರೆ, ಅವರ ಪುತ್ರನಿಗೇ ಟಿಕೆಟ್ ನೀಡಿರುವುದು ಈ ಪ್ರದೇಶದಲ್ಲಿ ಅವರು ಹೊಂದಿರುವ ಪ್ರಭಾವವನ್ನು ತೋರಿಸುತ್ತಿದೆ.


### ಭಾವಪೂರ್ಣ ಶ್ರದ್ಧಾಂಜಲಿ



ವಿನೋಬನಗರ, 2ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ ವಾಸಿಯಾದ ಕಾಂಗ್ರೆಸ್ ಕಾರ್ಯಕರ್ತ **ಬಸವರಾಜ್ ಎಂ.** ಇವರು ದಿನಾಂಕ : 02.05.2024ರ ಗುರುವಾರ ಮಧ್ಯಾಹ್ನ 11.30ಕ್ಕೆ ದೈವಾಧೀನರಾಗಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ದುಃಖತಪ್ತರು : 16ನೇ ವಾರ್ಡಿನ ವಿನೋಬನಗರದ ನೊಂದ ಕಾಂಗ್ರೆಸ್ ಕಾರ್ಯಕರ್ತರು

### 26ನೇ ವರ್ಷದ ಸವಿನೆನಪು



ದಿ|| ಎಸ್.ಸಿ.ಬಸಪ್ಪನವರು

ನೀವು ನಮ್ಮನ್ನಗಲಿ ಇಂದಿಗೆ 26 ವರ್ಷಗಳಾದವು. ನಿಮ್ಮ ಸವಿನೆನಪು ಸದಾ ಹಸಿರಾಗಿದ್ದು, ಸದಾ ನಿಮ್ಮ ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ

**ಮಗ, ಮಗಳು, ಸೊಸೆ ಮತ್ತು ಮೊಮ್ಮಕ್ಕಳು**

**ಫೋ.: 95917 59670**

### ಭಾವಪೂರ್ಣ ಶ್ರದ್ಧಾಂಜಲಿ



ವಿನೋಬನಗರ, 2ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ ವಾಸಿಯಾದ

**ಬಸವರಾಜಪ್ಪ ಎಂ.**

ಇವರು ದಿನಾಂಕ : 02.05.2024ರ ಗುರುವಾರ ಮಧ್ಯಾಹ್ನ 11.30ಕ್ಕೆ ದೈವಾಧೀನರಾಗಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಅಗಲಿಕೆಯ ನೋವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

**ಶ್ರೀ ಡಾ. ಮಂಜುನಾಥ್ ಆಲೂರ್ ಶ್ರೀಮತಿ ಶೈಲಜಾ ಮಂಜುನಾಥ್**
**ಶ್ರೀ ಡಾಕ್ಟರ್ ವರುಣ್ ಚಂದ್ರ ಆಲೂರ್ ಶ್ರೀಮತಿ ಡಾ. ವರ್ಷಿತ ವರುಣ್**
**ಶ್ರೀ ಕಿರಣ್ ಚಂದ್ರ ಆಲೂರ್ ಶ್ರೀಮತಿ ಹರ್ಷಿಣಿ ಕಿರಣ್ ಚಂದ್ರ ಆಲೂರು**
**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಹಾಸ್ಪಿಟಲ್ ಸಿಬ್ಬಂದಿ ವರ್ಗ**
**ಆಲೂರು ಎಂಟರ್‌ಪ್ರೈಸಸ್ ಸಿಬ್ಬಂದಿ ವರ್ಗ,**
**ಎಸ್.ಕೆ.ಬಿ ಆಲೂರು ಮೆಡಿಕಲ್ಸ್ ಸಿಬ್ಬಂದಿ ವರ್ಗ, ಆಲೂರು ಬಂಧು-ಮಿತ್ರರು.**

### ಸವಿನೆನಪು



**ದಿ. ಶ್ರೀಮತಿ ಸುಕನ್ಯಾ ಹೆಚ್.ಎಸ್.**

ಜನನ : 1.07.1968, ಮರಣ : 3.05.2017

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಪತಿ : ನರೇಂದ್ರ ಬಿ.ಆರ್.
ತಾಯಿ : ಶ್ರೀಮತಿ ಗೌರಮ್ಮ, ತಂದೆ : ತಿಪ್ಪೇರುದ್ರಪ್ಪ
ಚಿಕ್ಕಪ್ಪ : ಬಿ. ಕೆಂಪೇಗೌಡ ಮತ್ತು ಎಂ.ಎಲ್. ನಾಗರಾಜ್
ಚಿಕ್ಕಮ್ಮ : ಶ್ರೀಮತಿ ನಾಗಮಣಿ ಮತ್ತು ಶ್ರೀಮತಿ ವಿಶಾಲಾಕ್ಷಿ
ಮೈದುನ: ಬಿ.ಆರ್. ಶಿವಕುಮಾರ್, ಶ್ರೀಮತಿ ಜ್ಯೋತಿ,
ಚಂದನ ಹಾಗೂ ಬಂಧು-ಮಿತ್ರರು

### ಗೋಪನಾಳ್ ಪೂಜಾರ್ ಅಕ್ಕಮ್ಮ ನಿಧನ



ದಾವಣಗೆರೆ ಡಿಸಿಎಂ ಟೌನ್‌ಷಿಪ್ ಪೊಲೀಸ್ ಕ್ವಾರ್ಟ್ರ್ಸ್ ನಿವಾಸಿ ಗೋಪನಾಳ್ ಪೂಜಾರ್ ಅಕ್ಕಮ್ಮ (70) ಇವರು ದಿನಾಂಕ 2.5.2024ರ ಗುರುವಾರ ಸಂಜೆ 5.15ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.5.2024ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಗ್ಲಾಸ್ ಹೌಸ್ ಹಿಂಭಾಗವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಬಸವರಾಜ್ ಎಂ. ನಿಧನ



ವಿನೋಬನಗರ, 2ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ ವಾಸಿ ಬಸವರಾಜ್ ಎಂ. ಇವರು ದಿನಾಂಕ : 02.05.2024ರ ಗುರುವಾರ ಮಧ್ಯಾಹ್ನ 11.30ಕ್ಕೆ ನಿಧನರಾದರು. ಪತ್ನಿ ಮತ್ತು ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03.05.2024ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ದೊಡ್ಡಬಾತಿ ಗ್ರಾಮದ ದಾವಣಗೆರೆ ರುದ್ರಪ್ಪ ನಿಧನ



ದಾವಣಗೆರೆ ದೊಡ್ಡಬಾತಿ ಗ್ರಾಮದ ದಿ. ಗುರುಸಿದ್ದಪ್ಪನವರ ಪುತ್ರ ದಾವಣಗೆರೆ ರುದ್ರಪ್ಪ (74) ಇವರು ದಿನಾಂಕ 2.5.2024ರ ಗುರುವಾರ ಮಧ್ಯಾಹ್ನ 2.45ಕ್ಕೆ ನಿಧನರಾದರು. ಏಳು ಜನ ಪುತ್ರಿಯರು ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 3.05.2024ರ ಶುಕ್ರವಾರ ಬೆಳಿಗ್ಗೆ 11ಕ್ಕೆ ದೊಡ್ಡಬಾತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಅಂಕಲಿಮಠದ ಜಾತ್ರೆ : ನಗರದಲ್ಲಿ ಇಂದು ಸಭೆ

ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ತಲೆಕಟ್ಟು ಗ್ರಾಮದ ಅಂಕಲಿಮಠದ ಜಾತ್ರಾ ಮಹೋತ್ಸವ ಮತ್ತು ಭವ್ಯ ರಥೋತ್ಸವ ಹಾಗೂ ನೂತನ ಮಾಂಗಲ್ಯ ಭವನದ ಲೋಕಾ ರ್ಪಣೆಯ ಸಂಬಂಧ ಇಂದು ಬೆಳಿಗ್ಗೆ 10.30ಕ್ಕೆ ಬಿಐಇಟಿಯ ಬೆಳ್ಳಿಗಿರಿ ವಸತಿ ಗೃಹದಲ್ಲಿ ಪೂರ್ವಭಾವಿ ಸಭೆಯನ್ನು ಅಂಕಲಿಮಠದ ಶ್ರೀಗಳ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೆಟಿಜೆ ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ತಿಳಿಸಿದ್ದಾರೆ.

# ರೈತ ಸಂಘದ ಹುಚ್ಚವನಹಳ್ಳಿ ಮಂಜುನಾಥ್ ಬಣದಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ





ದಾವಣಗೆರೆ, ಮೇ 2- ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹುಚ್ಚವನಗಳ್ಳಿ ಮಂಜುನಾಥ್ ಬಣದ ಕಾರ್ಯಕರ್ತರು ನಗರದ ಕಾಂಗ್ರೆಸ್ ಪಕ್ಷದ ಕಚೇರಿ ಆವರಣದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿದರು.

## ಮೋದಿ ಬಂದ ಮೇಲೆ ದೊಡ್ಡ ರೈತರಿಗೆ ಉಪಯೋಗ ಆಗಿದೆ ಹೊರತು ಸಣ್ಣ ಮಟ್ಟದ ರೈತರಿಗಲ್ಲ : ಸಚಿವ ಎಸ್ಸೆಸ್ಸೆಂ

ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಹಾಗೂ ರಾಜ್ಯಾಧ್ಯಕ್ಷ ಹುಚ್ಚವನಹಳ್ಳಿ ಮಂಜುನಾಥ್ ನೇತೃತ್ವದಲ್ಲಿ ಬೆಂಬಲ ವ್ಯಕ್ತಪಡಿಸಲಾಯಿತು.

ಈ ವೇಳೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮಾತನಾಡಿ, ಇಲ್ಲಿರುವ ರೈತ ಸಂಘದವರು ಪರಿಚಿತರಾಗಿರುವರು, ಆನಗೋಡು ಗ್ರಾಮದಲ್ಲಿ ರೈತರ ಹುತಾತ್ಮ ಭವನ ಮಾಡಬೇಕು, ರೈತರ ಸಮುದಾಯ ಭವನ ನಿರ್ಮಿಸಬೇಕು, ಕೈಗೆಟುಕುವ ದರದಲ್ಲಿ ಕೃಷಿ ಸಾಮಾಗ್ರಿಗಳು ಸಿಗಬೇಕು ಎಂಬ ಹಲವು ಬೇಡಿಕೆಗಳಿಗೆ ಅವುಗಳನ್ನು ಹಂತ ಹಂತವಾಗಿ ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದೊಡ್ಡ ಪ್ರಮಾಣದ ರೈತರಿಗೆ ಉಪಯೋಗ ಆಗಿದೆಯೇ ಹೊರತು, ಸಣ್ಣ ಹಾಗೂ ಬಡ ರೈತರಿಗೆ ಉಪಯೋಗವಾಗಿಲ್ಲ ಎಂದು ಅವರು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ರೈತನ ಮಗಳು, ರೈತರ ಕಷ್ಟಗಳನ್ನು ಕಣ್ಣಾರೆ ಕಂಡವರು. ಕೃಷಿ ಪರಿಣಿತರಾಗಿರುವ ಅವರಿಗೆ ರೈತರ ಪ್ರತಿಯೊಂದು ವಿಚಾರಗಳಲ್ಲಿ ಅಪಾರವಾದ ಕಾಳಜಿ ಇದೆ. ನಾನು ಹಾಗೂ ನಮ್ಮ ತಂದೆಯವರಿಗಿಂತ ಹೆಚ್ಚಿನ ರೀತಿಯಲ್ಲಿ ಸಮಸ್ಯೆಗಳಿಗೆ ಸ್ಪಂದಿಸುವರು. ರೈತರ ಪ್ರತಿ ಹೋರಾಟದಲ್ಲಿ ನಾವುಗಳು ನಿಮ್ಮ ಜತೆ ಇರುತ್ತೇವೆ ಎಂದ ಅವರು ಮೇ 7 ರಂದು ತಾವುಗಳೆಲ್ಲ ಕುಟುಂಬ ಸಮೇತರಾಗಿ ಹಸ್ತದ ಗುರ್ತಿಗೆ ಮತ ನೀಡಿ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ ಅವರಿಗೆ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ರೈತ ಸಂಘದ ರಾಜ್ಯಾಧ್ಯಕ್ಷ ಹುಚ್ಚವನಹಳ್ಳಿ ಮಂಜುನಾಥ್, ರೈತ ಮುಖಂಡರಾದ ರಾಜನಹಟ್ಟಿ ರಾಜು, ಯಲೋದಹಳ್ಳಿ ರವಿಕುಮಾರ್, ಹೂವಿನಮಡು ನಾಗರಾಜ್, ಎಂ.ಬಿ. ಪಾಟೀಲ್, ಎಂ. ಕೆಂಚಮ್ಮ, ಎಂ. ಬಸಪ್ಪ, ಅಂಜಿನಪ್ಪ ಹಾಲಿವಾಣ, ಹನುಮಂತಪ್ಪ ಇತರರು ಉಪಸ್ಥಿತರಿದ್ದರು.

# ಪ್ರಜ್ವಲ್ ವಿರುದ್ಧ ಲುಕೌಟ್ ನೋಟಿಸ್ ಜಾರಿ



ಬೆಂಗಳೂರು, ಮೇ 2 - ಲೈಂಗಿಕ ಶೋಷಣೆ ಆರೋಪ ಹೊತ್ತಿರುವ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಪತ್ತೆ ಹಚ್ಚಿ ಕರೆತರಲು ಲುಕ್‌ಔಟ್ ನೋಟಿಸ್ ಜಾರಿಯಾಗಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗೃಹ ಸಚಿವ ಜಿ.ಪರಮೇಶ್ವರ್, ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರು.

ಪ್ರಜ್ವಲ್ ವಿದೇಶಕ್ಕೆ ಹೋಗಿರುವುದು ಸತ್ಯ ಹಾಗಾಗಿ ಲುಕ್‌ಔಟ್ ನೋಟಿಸ್ ನೀಡಲಾಗಿದೆ, ಎಲ್ಲಾ ವಿಮಾನ ನಿಲ್ದಾಣ, ರೈಲು ನಿಲ್ದಾಣ ಮತ್ತು ಬಂದರು ಸೇರಿದಂತೆ ಎಲ್ಲೆಡೆ ನೋಟಿಸ್ ನೀಡಿದ್ದೇವೆ ಎಂದರು.

ಪ್ರಜ್ವಲ್ ಹಾಗೂ ರೇವಣ್ಣ ಪ್ರಕರಣದಲ್ಲಿ ಯಾರನ್ನೂ ಬಿಡುವ ಮಾತಿಲ್ಲ, ಅವರು ನೋಟಿಸ್‌ಗೆ ಗೌರವ ನೀಡಿ ತನಿಖೆಗೆ ಹಾಜರಾಗದಿದ್ದರೆ, ಕಾನೂನಿನಂತೆ ಬಂಧಿಸಲಾಗುವುದು.

ಇಡೀ ವಿಶ್ವವೇ ನಮ್ಮ ಕಡೆ ನೋಡುವಂತಹ ಅಪರಾಧಿಕ ಕೃತ್ಯ ಹಾಸನದಲ್ಲಿ ನಡೆದಿದೆ, ಮೊದಲು ಪ್ರಕರಣವನ್ನು ಸಿಐಡಿಗೆ ವಹಿಸಿ ನಂತರ ಎಸ್.ಐ.ಟಿ. ರಚನೆ ಮಾಡಿದ್ದೇವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಇಬ್ಬರು ಮಹಿಳೆಯರು ದೂರು ನೀಡಿದ್ದಾರೆ, ಅವರ ದೂರಿನ ಅನ್ವಯ 41(ಎ) ಅಡಿ ನೋಟಿಸ್ ಜಾರಿ ಮಾಡಲಾಗಿದೆ. ನೋಟಿಸ್ ನೀಡಿದ 24 ಗಂಟೆಯೊಳಗಾಗಿ ವಿಚಾರಣೆಗೆ ಒಳಗಾಗಬೇಕು ಇಲ್ಲದಿದ್ದರೆ ಪೊಲೀಸರು ಕಾನೂನು ರೀತಿ ಮುಂದುವರೆಯುತ್ತಾರೆ ಎಂದರು.

ಅವರು ಸಮಯ ಕೇಳಿದರೂ ಕಾನೂನಿನಡಿಯಲ್ಲಿ ಸಮಯ ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರವೇ ಪ್ರಜ್ವಲ್‌ಗೆ ರಾಜತಾಂತ್ರಿಕ (ಡಿಪ್ಲೋಮ್ಯಾಟಿಕ್) ಪಾಸ್‌ಪೋರ್ಟ್ ನೀಡಿದೆ. ಹಾಗಾಗಿ ಆತ ರಾತ್ರೋ ರಾತ್ರಿ ವಿದೇಶಕ್ಕೆ ಹಾರಿದ್ದಾನೆ. ಈ ಪಾಸ್‌ಪೋರ್ಟ್‌ನ್ನು ರದ್ದುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಕೋರಿದ್ದಾರೆ. ಪ್ರಜ್ವಲ್ ಅನ್ನು ವಿದೇಶದಿಂದ ಕರೆಸಿ ವಿಚಾರಣೆ ನಡೆಸಲಾಗುವುದು, ಇದರಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಪ್ರಮುಖ ಆರೋಪಿಯಾಗಿ ಹೆಚ್.ಡಿ.ರೇವಣ್ಣ, ಎರಡನೇ ಆರೋಪಿ ಪ್ರಜ್ವಲ್ ರೇವಣ್ಣ ಇಬ್ಬರಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ ಎಂದರು.

ಈ ನಡುವೆ ಪ್ರಜ್ವಲ್ ವಿರುದ್ಧ ಇನ್ನೊಬ್ಬ ಮಹಿಳೆ, ಲೈಂಗಿಕ ದೌರ್ಜನ್ಯ ಹಾಗೂ ಹತ್ಯೆ ಬೆದರಿಕೆ ಪ್ರಕರಣ ದಾಖಲಿಸಿದ್ದಾರೆ.

## ಮತದಾನದ ನಂತರವೇ ಪ್ರಜ್ವಲ್ ವಾಪಸ್ ?

ಬೆಂಗಳೂರು, ಮೇ 2 - ಕರ್ನಾಟಕದಲ್ಲಿ ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣಾ ಮತದಾನದ ಪ್ರಕ್ರಿಯೆ ಮುಗಿದ ನಂತರ ಪ್ರಜ್ವಲ್ ರೇವಣ್ಣ ರಾಜ್ಯಕ್ಕೆ ಹಿಂತಿರುಗಲಿದ್ದಾರೆ ಎಂದು ಹೇಳಲಾಗುತ್ತಿದೆ.

ಅಸಂಖ್ಯಾತ ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ ಆರೋಪ ಹೊತ್ತಿರುವ ಪ್ರಜ್ವಲ್ ಅವರನ್ನು ಎಸ್‌ಐಟಿ ವಶಕ್ಕೆ ಪಡೆಯಲು ಕಸರತ್ತು ನಡೆಸಿದೆ ಅಷ್ಟೇ ಅಲ್ಲದೆ ರಾಜ್ಯ ಸರ್ಕಾರ ಅವರ ಲುಕ್‌ಔಟ್ ನೋಟಿಸ್ ಹೊರಡಿಸಿದೆ. ಅವರ ನಿಗದಿತ ಕಾರ್ಯಕ್ರಮದಂತೆ ಮೇ 4ರಂದು ರಾಜ್ಯಕ್ಕೆ ಹಿಂತಿರುಗಿ ಅಂದೇ ಎಸ್‌ಐಟಿ ಮುಂದೆ ಹಾಜರಾಗುವ ಉದ್ದೇಶ ಹೊಂದಿದ್ದರು.

ಹಾಸನ ಪ್ರಕರಣವನ್ನು ಆಡಳಿತಾರೂಢ ಕಾಂಗ್ರೆಸ್ ಮತ್ತಿತರರು ರಾಜಕೀಯವಾಗಿ ಬಳಸಿಕೊಂಡು ಚುನಾವಣಾ ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ.

ಎರಡನೇ ಹಂತದ ಚುನಾವಣೆಯ ಮತದಾನ ಸನಿಹ ಸಂದರ್ಭದಲ್ಲಿ ತಮ್ಮನ್ನು ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬ ಭಾವನೆ ಪ್ರಜ್ವಲ್‌ಗೆ ಬಂದಿದೆ.

ವಿದೇಶದಿಂದ ಹಿಂತಿರುಗುತ್ತಿದ್ದಂತೆ ತಮ್ಮನ್ನು ತನಿಖಾಧಿಕಾರಿಗಳು ಬಂಧಿಸಿ ವಿಚಾರಣೆಗೆ ಒಳಪಡಿಸಿದರೆ, ಅದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿ ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ಎನ್‌ಡಿಎ ಕೂಟಕ್ಕೆ ಹಿನ್ನಡೆಯಾಗಬಹುದು.

ವಕೀಲರು ಹಾಗೂ ಎನ್‌ಡಿಎ ಕೂಟದ ಕೆಲವು ಹಿರಿಯ ಮುಖಂಡರು ನೀಡಿದ ಸಲಹೆಯಂತೆ ಮತದಾನ ಮುಗಿದ ನಂತರ ಪ್ರಜ್ವಲ್ ರಾಜ್ಯಕ್ಕೆ ಹಿಂತಿರುಗಲಿದ್ದಾರೆ ಎಂದು ಹೇಳಲಾಗುತ್ತಿದೆ.

ಮತದಾನದವರೆಗೂ ಪ್ರಕರಣವನ್ನು ಜೀವಂತವಾಗಿರಿಸಿ ಕಾಂಗ್ರೆಸ್ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತದೆ.

ಇದರಿಂದ ಎನ್‌ಡಿಎ ಕೂಟಕ್ಕೆ ಭಾರೀ ಮುಜುಗರವಾಗಲಿದೆ, ಈ ಹಿನ್ನೆಲೆಯಲ್ಲಿ ಪ್ರಜ್ವಲ್ ಏಕಾಏಕಿ ತಮ್ಮ ನಿರ್ಧಾರವನ್ನು ಬದಲಿಸಿ ಮೇ 13 ರಂದು ತಾವು ತಂಗಿರುವ ದೇಶದಿಂದ ಹೊರಟು ನಗರಕ್ಕೆ ಧಾವಿಸಲಿದ್ದಾರೆ. ಹಿಂತಿರುಗಿದ ಒಂದೆರಡು ದಿನಗಳ ನಂತರ ಎಸ್‌ಐಟಿ ಮುಂದೆ ಹಾಜರಾಗುವ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗುತ್ತಿದೆ. ಆದರೆ, ಇದಕ್ಕೂ ಮುನ್ನ ಸರ್ಕಾರ ಹಾಗೂ ಎಸ್‌ಐಟಿ ಅವರನ್ನು ಕರೆತರಲು ಯಾವ ತಂತ್ರ ಅನುಸರಿಸುತ್ತದೋ ಕಾದುನೋಡಬೇಕು.

# ‘ಇಂಡಿಯಾ’ ಒಕ್ಕೂಟಕ್ಕೆ ನಾಯಕರಿಲ್ಲ

**(1ನೇ ಪುಟದಿಂದ)** ವಿದ್ಯುತ್ ಸಂಪರ್ಕ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ ಎಂದರು.

ದೇಶದ ಗಡಿ ಕಾಯುವ ಸೈನಿಕರಿಗೆ ಮೋದಿಯವರು ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿ ಅವರಿಗೆ ಸಂಪೂರ್ಣ ಸ್ವಾತಂತ್ರ ನೀಡುವ ಮೂಲಕ ಅವರಿಗೆ ಬಲ ತುಂಬಿದ್ದಾರೆ ಆದರೆ ಈ ಹಿಂದೆ ಕಾಂಗ್ರೆಸ್ ಸರ್ಕಾರ ಸೈನ್ಯವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿತ್ತು ಎಂದು ದೂರಿದರು.

ಮೋದಿಯವರ ಆಸೆಯಂತೆ ಈ ಬಾರಿ ಬಿಜೆಪಿ 400ಕ್ಕೂ ಹೆಚ್ಚು ಸ್ಥಾನ ಗೆಲ್ಲಬೇಕಿದೆ ಹಾಗಾಗಿ ನಮ್ಮ ದಾವಣಗೆರೆ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಅವರಿಗೆ ಹರಪನಹಳ್ಳಿ ತಾಲೂಕಿನಿಂದ ಹೆಚ್ಚು ಮತಗಳನ್ನು ನೀಡಿ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಮಾಜಿ ಶಾಸಕ ಜಿ.ಕರುಣಾಕರರೆಡ್ಡಿ ಮಾತನಾಡಿ ಈ ಬಾರಿ ನಮ್ಮ ಬಿಜೆಪಿ ಅಭ್ಯರ್ಥಿ ಗೆಲ್ಲುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇದು ದೇಶದ ಮಹತ್ವದ ಚುನಾವಣೆ. ಕಳೆದ ಹತ್ತು ವರ್ಷದಲ್ಲಿ ಮೋದಿಯವರು ದೇಶದಲ್ಲಿ ಸಾಕಷ್ಟು ಬದಲಾವಣೆ ತಂದಿದ್ದಾರೆ ಎಂದರು.

ನಾನು ಈ ಕ್ಷೇತ್ರದಲ್ಲಿ ಸಂಸದನಾಗಿ, ಶಾಸಕ, ಸಚಿವನಾಗಿ ತಾಲೂಕಿನಲ್ಲಿ ಕೆರೆ ನೀರು ತುಂಬಿಸುವ ಯೋಜನೆ, ರಸ್ತೆ, ಶಾಲಾ ಕೊಠಡಿ, ಹಾಸ್ಟೆಲ್‌ಗಳು, ಡಿಗ್ರಿ ಕಾಲೇಜು ಸೇರಿದಂತೆ ಸಾಕಷ್ಟು ಅಭಿವೃದ್ಧಿ ಮಾಡಿದ್ದೇನೆ ಸೋಲು-ಗೆಲುವಿನಲ್ಲಿ ನಿಮ್ಮ ಜೊತೆ ಅಣ್ಣ-ತಮ್ಮನಾಗಿ ಇದ್ದೇನೆ ಎಂದರು.

ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮಾತನಾಡಿ ನಮ್ಮ ಮಕ್ಕಳ ಭವಿಷ್ಯ, ಮಹಿಳೆಯರ ರಕ್ಷಣೆ, ದೇಶದ ಭದ್ರತೆಗಾಗಿ, ಉತ್ತಮ ನಾಯಕರಾದ ನರೇಂದ್ರ ಮೋದಿಗಾಗಿ ಬಿಜೆಪಿ ಪಕ್ಷದ ಕಮಲದ ಗುರುತಿಗೆ ಮತ ಹಾಕಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಕಿರಣ್, ರೋಕ್ಕಪ್ಪ, ಕೌಟಿ ಸುಮಾ, ತಾರಾ ಹನುಮಂತಪ್ಪ, ಗೌಳಿ ವಿನಯ್, ಮುಖಂಡರಾದ ವಿಷ್ಣುರೆಡ್ಡಿ ಆರ್. ಲೋಕೇಶ, ಯಡಿಹಳ್ಳಿ ಶೇಖಣ್ಣ, ಶಿರಗನಹಳ್ಳಿ ವಿಶ್ವನಾಥ, ತಿಮ್ಮಣ್ಣ, ವಿಜಯಲಕ್ಷ್ಮೀ, ಪ್ರಕಾಶ, ಮಹೇಶ, ರೇವಣಸಿದ್ದಪ್ಪ ಸೇರಿದಂತೆ ಇತರರು ಇದ್ದರು.

# ಖಾಸಗಿ ಬಸ್ ನಿಲ್ದಾಣದ ಅಭಿವೃದ್ಧಿಗೆ ಕ್ರಮ : ಸಚಿವ ಎಸ್ಸೆಸ್ಸೆಂ



**(1ನೇ ಪುಟದಿಂದ)** ಕುಟುಂಬಗಳು ನೆಮ್ಮದಿಯ ಜೀವನ ಮಾಡುತ್ತಿವೆ. ದಾವಣಗೆರೆಯಲ್ಲಿ ಭವ್ಯವಾದ ಖಾಸಗಿ ಬಸ್ ನಿಲ್ದಾಣ ಆಗಬೇಕಿತ್ತು. ಖಾಸಗಿ ಬಸ್ ನಿಲ್ದಾಣವನ್ನು ನಾವು ಅಭಿವೃದ್ಧಿ ಪಡಿಸಲು ಪಣ ತೊಟ್ಟಿದ್ದೇವೆ ಎಂದರು.

ಹಿಂದಿನಿಂದಲು ಖಾಸಗಿ ಬಸ್ ಮಾಲೀಕರು, ಚಾಲಕರು ಕ್ಲೀನರ್‌ಗಳು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಾ ಬಂದಿದ್ದು, ಈ ಬಾರಿಯ ನಮ್ಮ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತವನ್ನು ನೀಡಿ ಲೋಕಸಭೆಗೆ ಕಳಿಸಬೇಕು ಈ ಮೂಲಕ ಜಿಲ್ಲೆಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಸಹಕರಿಸಬೇಕು ಎಂದರು.

ಈ ವೇಳೆ ಖಾಸಗಿ ಬಸ್ ಮಾಲೀಕರ ಹಾಗೂ ಚಾಲಕರ ಸಂಘದ ಗೌರವಾಧ್ಯಕ್ಷ ಕಂಬತ್ತಹಳ್ಳಿ ಮಂಜುನಾಥ್, ಏಜೆಂಟರ ಸಂಘದ ಅಧ್ಯಕ್ಷ ಉಮೇಶ್ ರಾವ್ ಸಾಳಂಕಿ, ಖಂಡೋಜಿರಾವ್, ಎಂ.ಆರ್.ಸತೀಶ್, ಆರ್.ಜಿ.ಸತ್ಯನಾರಾಯಣ, ಸೋಮಶೇಖರ್, ಅಸ್ಲಾಂ, ಪೀರ್ ಬಾಷ, ಆರ್.ಜಿ.ಕುಮಾರ್, ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ ಹಾಗೂ ಇತರರು ಉಪಸ್ಥಿತರಿದ್ದರು.

# ಮಣಿಪುರ : ಸಂಘರ್ಷ ಮುಗಿದರೂ ಸಂಕಷ್ಟ ತಪ್ಪಿಲ್ಲ

## ಗಲಭೆಗಳ ನಂತರ ದೂರವಾಗಿರುವ ಅಂತರ್ ಬುಡಕಟ್ಟು ದಂಪತಿಗಳು

ಇಂಫಾಲ್, ಮೇ 1 - ಮಣಿಪುರದಲ್ಲಿ ಮೀಟಿ ಹಾಗೂ ಕುಕಿ ಸಮುದಾಯಗಳ ನಡುವಿನ ಸಂಘರ್ಷಕ್ಕೆ ಒಂದು ವರ್ಷವಾಗುತ್ತಾ ಬಂದಿದೆ. ಸಂಘರ್ಷ ಕಡಿಮೆಯಾಗಿದ್ದರೂ, ಸಮಸ್ಯೆಗಳು ಕಡಿಮೆಯಾಗಿಲ್ಲ. ವಿಶೇಷವಾಗಿ ಮೀಟಿ ಹಾಗೂ ಕುಕಿ ಬುಡಕಟ್ಟಿನ ನಡುವೆ ಮದುವೆಯಾದವರು ಈಗಲೂ ಪ್ರತ್ಯೇಕವಾಗಿ ಬದುಕುವ ಸಂಕಷ್ಟದಲ್ಲಿದ್ದಾರೆ.

ಮೀಟಿ ಸಮುದಾಯದವರು ಇಂಫಾಲ್ ಕಣಿವೆಯ ಕಡೆ ತೆರಳಿದ್ದಾರೆ. ಕುಕಿ ಸಮುದಾಯದವರು ಸುತ್ತಲಿನ ಬೆಟ್ಟಗಳ ಕಡೆ ನಡೆದಿದ್ದಾರೆ. ಅಂತರ ಬುಡಕಟ್ಟು ದಂಪತಿಗಳು ಎರಡೂ ಕಡೆ ಇರಲಾಗದೇ ಬಳಲುತ್ತಿದ್ದಾರೆ. ಮೇ 3, 2023ರ ನಂತರ ಸಾವಿರಾರು ಜನರು ಸ್ಥಳಾಂತರಗೊಂಡಿದ್ದಾರೆ.

ಅಗಲಿಕೆಯ ದಿನಗಳು ಹೆಚ್ಚಾಗುತ್ತಿರುವಂತೆ ಸಂಬಂಧಗಳೇ ಮುರಿದು ಬೀಳುವ ಅಪಾಯವೂ ಎದುರಾಗುತ್ತಿದೆ. ಭವಿಷ್ಯದ ಬಗ್ಗೆ ಕಳವಳವಾಗುತ್ತಿದೆ.

ಕುಕಿ ಸಮುದಾಯದ ಇರೀನ್ ಹೋಕಿಪ್ ಅವರು ಮದುವೆಯ ನಂತರ ಇಂಫಾಲಕ್ಕೆ ತೆರಳಿದ್ದರು. ಕಳೆದ ಒಂದು ವರ್ಷದಿಂದ ಹೋಕಿಪ್ ಅವರು ಕುಕಿ ಜನರೇ ಹೆಚ್ಚಾಗಿರುವ ಚುರಾಚಂದಾಪುರಕ್ಕೆ ತೆರಳಿದ್ದಾರೆ. ಅವರು ತಮ್ಮ ಕುಟುಂಬದ ಜೊತೆ ನೆಲೆಸಿದ್ದಾರೆ. ಅವರ ಪತಿ ಮಕ್ಕಳೊಂದಿಗೆ ಇಂಫಾಲದಲ್ಲೇ ಉಳಿದುಕೊಂಡಿದ್ದಾರೆ.

ನನ್ನ ಗಂಡ ಕಟ್ಟಡ ಕಾಮಗಾರಿ ಗುತ್ತಿಗೆದಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ನಾವು 2018ರಲ್ಲಿ ಪ್ರೇಮ ವಿವಾಹವಾಗಿದ್ದೆವು ಎಂದು ಹೋಕಿಪ್ ತಿಳಿಸಿದ್ದಾರೆ.

ಮೀಟಿಗಳು ಹೆಚ್ಚಾಗಿರುವ ಇಂಫಾಲ್ ಹಾಗೂ ಕುಕಿಗಳು ಹೆಚ್ಚಾಗಿರುವ ಚುರಾಚಂದಾಪುರ ನಡುವೆ ಇರುವ ಬಿಷ್ಣುಪುರದಲ್ಲಿ ದಂಪತಿ ನೆಲೆಸಿದ್ದರು. ಎರಡೂ ಸಮುದಾಯದವರು ಈ ಪ್ರದೇಶವನ್ನು ತಟಸ್ಥ ವಲಯ ಎಂದೇ ಭಾವಿಸಿದ್ದರು.

ಘರ್ಷಣೆ ಆರಂಭವಾದಾಗ ನನ್ನ ಜೀವಕ್ಕೆ ಅಪಾಯ ಇದೆ ಎಂದು ನನ್ನನ್ನು ಕಣಿವೆಗೆ ಕಳಿಸಲಾಗಿತ್ತು. ನಂತರದಿಂದಲೂ ವಾಪಸ್ ಹೋಗಲು ಸಾಧ್ಯವಾಗಿಲ್ಲ. ನನ್ನ ಮಕ್ಕಳು ಮೀಟಿ ಸಮುದಾಯಕ್ಕೆ ಸೇರಿದವರಾದ ಕಾರಣ ಚುರಾಚಂದಾಪುರದಲ್ಲಿ ಸುರಕ್ಷಿತವಲ್ಲ ಎಂದು ಹೋಕಿಪ್ ಹೇಳಿದ್ದಾರೆ. ತಿಂಗಳಿಗೊಂದು ದಂಪತಿ 15 ಗಂಟೆ ಪ್ರಯಾಣ ಮಾಡುವ ಮೂಲಕ ಪಕ್ಕದ ಮಿಜೋರಾಂ ರಾಜ್ಯದಲ್ಲಿ ಭೇಟಿ ಮಾಡುತ್ತಿದ್ದಾರೆ.

ನನ್ನ ಗಂಡ ಮಕ್ಕಳನ್ನು ತಮ್ಮೊಂದಿಗೆ ಕರೆತರುತ್ತಾರೆ. ಇತರೆ ಹಲವು ದಂಪತಿಗಳೂ ಇದೇ ರೀತಿ ಮಾಡುತ್ತಿದ್ದಾರೆ. ಮಕ್ಕಳೀಗ ತಾಯಿ ಪ್ರೀತಿ ಹಾಗೂ ಜೀವದ ನಡುವೆ ಆಯ್ಕೆ ಮಾಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಹೋಕಿಪ್ ಹೇಳಿದ್ದಾರೆ.

ಮೀಟಿ ಹಾಗೂ ಕುಕಿ ಸಮುದಾಯಗಳ ನಡುವೆ ಮದುವೆ ಈ ಹಿಂದೆ ಅಪರೂಪದ ವಿಷಯವೇನೂ ಆಗಿರಲಿಲ್ಲ. ಉಭಯ ಸಮುದಾಯದವರು ಸುಲಭವಾಗಿ ಬೆರೆಯುತ್ತಿದ್ದರು. ಆದರೆ, ಮೇ 3ರಂದು ಮೀಟಿ ಸಮುದಾಯದವರಿಗೆ ಎಸ್.ಟಿ. ಸ್ಥಾನ ನೀಡುವ ಬೇಡಿಕೆಯ ವಿರುದ್ಧ ಪ್ರತಿಭಟನೆಗಳು ಆರಂಭವಾದ ನಂತರ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ.

ಗಲಭೆಗಳು ಆರಂಭವಾದ ತಿಂಗಳ ನಂತರ ಕುಕಿ ಸಮುದಾಯದ ಲೈಶ್ರಾಮ್ ಸಿಂಗ್ ಅವರು ತಂದೆಯಾಗಿದ್ದರು. ನಂತರ ಅವರು ಕುಕಿಗಳು ಹೆಚ್ಚಾಗಿರುವ ಬೆಟ್ಟಗಳ ಕಡೆ ತೆರಳಿದರು. ಅವರ ಪತ್ನಿ ಮೀಟಿ ಸಮುದಾಯದ ಅಚಂಬ ಅವರು ಇಂಫಾಲದ ಕಾಳಜಿ ಶಿಬಿರದಲ್ಲಿ ಉಳಿದುಕೊಂಡಿದ್ದಾರೆ. ಮಗುವಿನ ಜನನವಾಗಿ 11 ತಿಂಗಳಾದರೂ, ಸಿಂಗ್ ಪುತ್ರಿಯನ್ನು ನೋಡಲು ಸಾಧ್ಯವಾಗಿಲ್ಲ.

ಈ ಅಂತರದ ಕಾರಣದಿಂದಾಗಿ ಮದುವೆ ಮುರಿದು ಬೀಳಬಹುದು ಎಂಬ ಕಳವಳ ಇದೆ. ಮೊಬೈಲ್ ಮೂಲಕ ಆಗಾಗ ಗಂಡ ಸಂಪರ್ಕಿಸುತ್ತಾರೆ. ಆದರೆ, ಈ ಸಂಪರ್ಕವೂ ಕಡಿಮೆಯಾಗುತ್ತಿದೆ. ಕುಕಿ ಹುಡುಗಿಯನ್ನು ಮದುವೆಯಾಗುವಂತೆ ಅವರ ಮೇಲೆ ಒತ್ತಡ ಇದೆ ಎಂದು ಅಚಂಬ ಹೇಳಿದ್ದಾರೆ.

ಈಗ ನಾನು ವಿಧವೆಯೂ ಅಲ್ಲ, ವಿಚ್ಛೇದಿತೆಯೂ ಅಲ್ಲ. ಬೇರೆಯಾಗಿ ಬದುಕುವುದನ್ನು ಯಾವ ರೀತಿ ಭಾವಿಸಬೇಕೋ ತಿಳಿಯುತ್ತಿಲ್ಲ ಎಂದವರು ಹೇಳುತ್ತಾರೆ.

ಕುಕಿ ಸಮುದಾಯದ ನಿರ್ಮಲ ಅವರು ಕಳೆದ ವರ್ಷದವರೆಗೂ ಇಮಾ ಕೈಥೆಲ್ ಮಾರುಕಟ್ಟೆಯಲ್ಲಿ ಅಂಗಡಿ ನಡೆಸುತ್ತಿದ್ದರು. ಈಗ ಬೆಟ್ಟ ಪ್ರದೇಶದಲ್ಲಿ ನೆಲೆಸಿದ್ದಾರೆ. ಬದುಕುವುದಕ್ಕೆ ಪರದಾಡುತ್ತಿದ್ದಾರೆ.

ಮೀಟಿ ಸಮುದಾಯದ ಅವರ ಪತಿ ಮಗನೊಂದಿಗೆ ಇಂಫಾಲದಲ್ಲಿ ನೆಲೆಸಿದ್ದಾರೆ. ಮೊದಲು ಹಣ ಕಳಿಸುತ್ತಿದ್ದರು. ಈಗ ನಿಲ್ಲಿಸಿದ್ದಾರೆ. ಜೀವನದಲ್ಲಿ ಮೊದಲ ಬಾರಿಗೆ ನಾನು ಬೇರೆಯವರಿಗೆ ಹೊರೆಯಾದ ಭಾವನೆ ಬರುತ್ತಿದೆ ಎಂದು ನಿರ್ಮಲಾ ಹೇಳಿದ್ದಾರೆ.

ರಾಜ್ಯದಲ್ಲಿ ಈಗಲೂ ಆಗಾಗ ಸಂಘರ್ಷದ ಘಟನೆಗಳು ನಡೆಯುತ್ತಿವೆ. ಕೆಲವೊಮ್ಮೆ ಮೀಟಿ ಹಾಗೂ ಕುಕಿ ಸಮುದಾಯಗಳ ನಡುವಿನ ಘರ್ಷಣೆ ತೀವ್ರ ಸ್ವರೂಪವನ್ನೂ ಪಡೆಯುತ್ತಿದೆ.

# ಓಲೈಕೆ ರಾಜಕೀಯಕ್ಕಾಗಿ ಹಿಂದೂಗಳ ಒಡೆಯುವ ಯತ್ನ : ಮೋದಿ ಖಂಡನೆ

**ಶಿವ – ರಾಮ ದೇವರ ಕುರಿತ ಖರ್ಗೆ ಹೇಳಿಕೆಗೆ ಪ್ರಧಾನಿ ತರಾಟೆ**

ನವದೆಹಲಿ, ಮೇ 2 – ರಾಮ ಹಾಗೂ ಶಿವ ದೇವರ ಕುರಿತು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಹೇಳಿಕೆಗಳನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಓಲೈಕೆ ರಾಜಕೀಯಕ್ಕಾಗಿ ಹಿಂದೂಗಳನ್ನು ಒಡೆಯಲು ಕಾಂಗ್ರೆಸ್ ಪ್ರಯತ್ನ ನಡೆಸಿದೆ ಎಂದು ಆರೋಪಿಸಿದ್ದಾರೆ.

ಗುಜರಾತ್‌ನ ಸುರೇಂದ್ರ ನಗರದಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಖರ್ಗೆ ದುರುದ್ದೇಶದಿಂದ ಮಾತನಾಡುತ್ತಿದ್ದಾರೆ. ಹಿಂದೂ ಸಮುದಾಯವನ್ನು ಒಡೆಯುವ ಆಟ ಆಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಛತ್ತೀಸ್‌ಘಡದಲ್ಲಿ ನಿನ್ನೆ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಖರ್ಗೆ, ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿಯ ಹೆಸರು ಶಿವಕುಮಾರ್ ದಹರಿಯಾ ಆಗಿದೆ. ರಾಮನ ವಿರುದ್ಧ ಸ್ಪರ್ಧಿಸಲು ಶಿವನಿಗೆ ಸಾಧ್ಯ. ನಾನೂ ಸಹ ಮಲ್ಲಿಕಾರ್ಜುನ. ಮಲ್ಲಿಕಾರ್ಜುನ ಎಂದರೂ ಶಿವ ಎಂದು ತಿಳಿಸಿದ್ದರು.

ಖರ್ಗೆ ಹೇಳಿಕೆಗೆ ಆಕ್ಷೇಪಿಸಿರುವ ಮೋದಿ, ಈಗ ಕಾಂಗ್ರೆಸ್‌ನವರು ರಾಮ ಹಾಗೂ ಶಿವ ಭಕ್ತರ ನಡುವೆ ಒಡಕು ತರಲು ಯತ್ನಿಸುತ್ತಿದ್ದಾರೆ.

ಪರಸ್ಪರರ ವಿರುದ್ಧ ಹೊಡೆದಾಡಲಿ ಎಂದು ಬಯಸಿದ್ದಾರೆ. ನಮ್ಮ ಸಾವಿರಾರು ವರ್ಷಗಳ ಸಂಪ್ರದಾಯವನ್ನು ಒಡೆಯಲು ಮೊಘಲರಿಗೂ ಸಾಧ್ಯವಾಗಲಿಲ್ಲ. ಈಗ ಕಾಂಗ್ರೆಸ್‌ನರು ಒಡೆಯಲು ಬಯಸಿದ್ದಾರೆಯೇ? ಕಾಂಗ್ರೆಸ್ ಓಲೈಕೆಯಲ್ಲಿ ಎಷ್ಟು ಪತನ ಕಾಣಲು ಸಾಧ್ಯ? ಎಂದು ಪ್ರಶ್ನಿಸಿದ್ದಾರೆ.

# ಚೀನಾದಲ್ಲಿ ಹೆದ್ದಾರಿ ಕುಸಿದು 36 ಸಾವು

ಬೀಜಿಂಗ್, ಮೇ 2 - ಭಾರೀ ಮಳೆ ಕಾರಣದಿಂದಾಗಿ ದಕ್ಷಿಣ ಚೀನಾದಲ್ಲಿ ಹೆದ್ದಾರಿ ಕುಸಿತವಾಗಿದ್ದು, ವಾಹನಗಳು ಉರುಳಿ ಬಿದ್ದಿವೆ. ಅಪಘಾತದಲ್ಲಿ ಕನಿಷ್ಠ 36 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬುಧವಾರ ಮಧ್ಯರಾತ್ರಿ 2 ಗಂಟೆ ಸಮಯದಲ್ಲಿ 17.9 ಮೀಟರ್ ಭಾಗ ಕುಸಿದಿದೆ. ಇದರಲ್ಲಿ 23 ವಾಹನಗಳು ಉರುಳಿವೆ. ಘಟನೆಯಲ್ಲಿ 30 ಇತರರು ಗಾಯಗೊಂಡಿದ್ದು, ಅವರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಮೀಝೌ ಅಧಿಕಾರಿಗಳು ಹೇಳಿದ್ದಾರೆ. ಗ್ವಾಂಗ್‌ಡಾಂಗ್ ಪ್ರಾಂತ್ಯದಲ್ಲಿ ಕಳೆದ ಎರಡು ವಾರಗಳಿಂದ ದಾಖಲೆ ಪ್ರಮಾಣದ ಮಳೆ ಹಾಗೂ ಪ್ರವಾಹ ಕಂಡು ಬರುತ್ತಿದೆ. ಚಂಡಮಾರುತದ ಕಾರಣದಿಂದಾಗಿ ಗ್ವಾಂಗ್‌ಝೌನಲ್ಲಿ ಐವರು ಸಾವನ್ನಪ್ಪಿದ್ದಾರೆ.

ಏಪ್ರಿಲ್ ಆರಂಭದಲ್ಲಿ ಮೀಝೌನ ಕೆಲವು ಗ್ರಾಮಗಳಲ್ಲಿ ಪ್ರವಾಹ ಉಂಟಾಗಿತ್ತು. ಇತ್ತೀಚಿನ ದಿನಗಳಲ್ಲಿ ನಗರ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿದೆ.

# ಜಿಲ್ಲೆಯಿಂದ 216 ಜನ ಹಜ್ ಯಾತ್ರೆಗೆ ಪ್ರಯಾಣ



ದಾವಣಗೆರೆ, ಮೇ 2 - ಈ ಬಾರಿ ಪವಿತ್ರ ಹಜ್ ಯಾತ್ರೆಗೆ ಜಿಲ್ಲೆಯಿಂದ 216 ಜನ ಪ್ರಯಾಣ ಬೆಳೆಸಲಿದ್ದಾರೆ.

ಇಲ್ಲಿಯ ಕೆ.ಆರ್. ರಸ್ತೆಯಲ್ಲಿರುವ ಗುಲ್ಷನ್ ಶಾದಿಮಹಲ್‌ನಲ್ಲಿ ಖಾದಿ ಮುಲ್ ಹುಜ್ಜಾಜ್ ಸಮಿತಿ ಆಶ್ರಯದಲ್ಲಿ ಹಜ್ ಯಾತ್ರಿಕರಿಗೆ ತರಬೇತಿ ಶಿಬಿರ ಹಾಗೂ ಚುಚ್ಚುಮದ್ದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಪಾಲ್ಗೊಂಡು ತಮ್ಮಗಳ ಪ್ರಯಾಣ ಸುಖಕರವಾಗಲಿ ಎಂದು ಶುಭ ಹಾರೈಸಿದರು.

ಮುಸ್ಲಿಂ ಸಮಾಜದ ಮುಖಂಡ ಸಾಧೀಕ್ ಪೈಲ್ವಾನ್, ಜಿಲ್ಲಾ ಹಜ್ ಸಮಿತಿ ಅಧ್ಯಕ್ಷ ಅಯೂಬ್ ಪೈಲ್ವಾನ್, ಕಾರ್ಯದರ್ಶಿ ಟಿ.ಎಸ್. ರಹಮತ್ ವುಲ್ಲಾ, ರಾಜ್ಯ ಹಜ್ ಕಮಿಟಿ ಸದಸ್ಯ ಸೈಯಿದ್ ಚಾರ್ಲಿ, ಪಾಲಿಕೆ ಸದಸ್ಯ ಎ.ಬಿ. ರಹೀಮ್, ಎನ್. ಕೆ. ಇಸ್ಮಾಯಿಲ್, ಚಾರ್ಲಿ ಎಜ್ಯುಕೇಷನ್ ಫೌಂಡೇಶನ್‌ನ ವಸೀಮ್ ಚಾರ್ಲಿ, ಸೈಯದ್ ಹಸೀಬ್ ಹಬೀಬ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉಲೇಮಾಗಳಿಂದ ತರಬೇತಿ ನೀಡಲಾಯಿತು.

ಯಾತ್ರಿಗಳಾದ ಅತಾವುಲ್ಲಾ, ಮಹಮ್ಮದ್ ಜುಬೇರ್ ಅವರುಗಳು ಮಾತನಾಡಿ, ಸರ್ಕಾರದ ಅಡಿಯಲ್ಲಿ ನಮಗೆ ಲಾಟರಿ ಮೂಲಕ ಆಯ್ಕೆ ನಡೆದು ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದ್ದು ಬಹಳ ಉತ್ತಮವಾದ ವ್ಯವಸ್ಥೆ ಮಾಡಲಾಗಿದೆ ಎಂದು ಹಕಾನಿ ಅತಾವುಲ್ಲಾ ಅವರು ವಿವರಿಸಿದರು.


**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ**

**ಎಸ್.ಸಿ. ನಂ. 16/2023**

**ವಾದಿ : ಮ್ಯಾನೇಜರ್ ಕರ್ನಾಟಕ ಗ್ರಾಮೀಣ ಬ್ಯಾಂಕ್, ವಾಸನ ಶಾಖೆ, ಹರಿಹರ ತಾಲ್ಲೂಕು -ವಿರುದ್ಧ-**

**ಪ್ರತಿವಾದಿಯರು : ಲಿಂಗರಾಜು ತಂದೆ ವಿರುಪಾಕ್ಷಪ್ಪ ವಯಸ್ಸು 30 ವರ್ಷ, ಬಾರ್ ಬಾರ್ ಅಂಗಡಿ ಕೆಲಸ ವಾಸ : ಉಕ್ಕಡಗಾತ್ರಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ**

**ಪ್ರತಿವಾದಿಯವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ರೂಲ್ 20ರ ಪ್ರಕಾರ ದಾವೆ ಸಮನ್ಸ್**

ಈ ಮೇಲ್ಕಂಡ ದಾವೆಯಲ್ಲಿ ವಾದಿಯರು ಪ್ರತಿವಾದಿಯ ವಿರುದ್ಧ ಈ ಮೇಲ್ಕಂಡ ದಾವೆಯನ್ನು ಬಾಕಿ ರೂ. 44000-40/- ವಸೂಲಾತಿಗಾಗಿ ಸಲ್ಲಿಸಿದ್ದು ಇರುತ್ತದೆ. ಈ ಮೇಲ್ಕಂಡ ದಾವೆಯಲ್ಲಿ ಹೇಳಿರುವ ಪ್ರತಿವಾದಿಯವರಿಗೆ ದಾವಾ ಸಮನ್ಸ್‌ನ್ನು ಗೌರವಾನ್ವಿತ ನ್ಯಾಯಾಲಯವು ಹೊರಡಿಸಿದ್ದು ನ್ಯಾಯಾಲಯದ ಅಮೀನ್ ರವರು ನ್ಯಾಯಾಲಯದ ಸಮನ್ಸ್‌ನ್ನು ಪ್ರತಿವಾದಿಯರು ಮೇಲ್ಕಂಡ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದು ಹಿಂಬರಹದೊಂದಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ಗೌರವಾನ್ವಿತ ನ್ಯಾಯಾಲಯವು ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರಾಗಲೀ ಸದರಿ ದಿನಾಂಕ : 27.05.2024 ರಂದು ಬೆಳಿಗ್ಗೆ 11 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಲು ತಿಳಿಸಲಾಗಿದೆ. ತಪ್ಪಿದಲ್ಲಿ ಪ್ರಕರಣವನ್ನು / ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷಿಯ ಎಂದು ತೀರ್ಮಾನಿಸಿ ಪ್ರಕರಣ ಇತ್ಯಾರ್ಥ ಪಡಿಸಲಾಗುವುದು ತಿಳಿಯಿರಿ.

ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 03.04.2024 ರಂದು ನೀಡಲಾಗಿದೆ.

**ವಾದಿಯರ ಪರ ವಕೀಲರು**
**ಬಸವರಾಜ ಓಂಕಾರಿ**
**ವಕೀಲರು, ಹರಿಹರ**

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ**



**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಿಹರ**

**ಎಸ್.ಸಿ. ನಂ. 4/2022**

**ವಾದಿ : ಮ್ಯಾನೇಜರ್ ಕರ್ನಾಟಕ ಗ್ರಾಮೀಣ ಬ್ಯಾಂಕ್, ದೇವರಬೆಳೆಕೆರೆ ಶಾಖೆ, ಹರಿಹರ ತಾಲ್ಲೂಕು -ವಿರುದ್ಧ-**

**ಪ್ರತಿವಾದಿಯರು : ತಿಪ್ಪಣ್ಣ ತಂದೆ ಕೆಂಚಪ್ಪ, ವಯಸ್ಸು 68 ವರ್ಷ, ವ್ಯವಸಾಯಗಾರರು ವಾಸ : ಸಂಕ್ಲೀಪುರ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ**

**ಪ್ರತಿವಾದಿಯವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ರೂಲ್ 20ರ ಪ್ರಕಾರ ದಾವೆ ಸಮನ್ಸ್**

ಈ ಮೇಲ್ಕಂಡ ದಾವೆಯಲ್ಲಿ ವಾದಿಯವರು ಪ್ರತಿವಾದಿಯ ವಿರುದ್ಧ ಈ ಮೇಲ್ಕಂಡ ದಾವೆಯನ್ನು ಬಾಕಿ ರೂ. 44600/- ವಸೂಲಾತಿಗಾಗಿ ಸಲ್ಲಿಸಿದ್ದು ಇರುತ್ತದೆ. ಈ ಮೇಲ್ಕಂಡ ದಾವೆಯಲ್ಲಿ ಹೇಳಿರುವ ಪ್ರತಿವಾದಿಯವರಿಗೆ ದಾವಾ ಸಮನ್ಸ್‌ನ್ನು ಗೌರವಾನ್ವಿತ ನ್ಯಾಯಾಲಯವು ಹೊರಡಿಸಿದ್ದು ನ್ಯಾಯಾಲಯ ಅಮೀನ್ ರವರು ನ್ಯಾಯಾಲಯದ ಸಮನ್ಸ್‌ನ್ನು ಪ್ರತಿವಾದಿಯರು ಮೇಲ್ಕಂಡ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದು ಹಿಂಬರಹದೊಂದಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ಗೌರವಾನ್ವಿತ ನ್ಯಾಯಾಲಯವು ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರಾಗಲೀ ಸದರಿ ದಿನಾಂಕ : 27.05.2024 ರಂದು ಬೆಳಿಗ್ಗೆ 11 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಹಾಜರಾಗಲು ತಿಳಿಸಲಾಗಿದೆ. ತಪ್ಪಿದಲ್ಲಿ ಪ್ರಕರಣವನ್ನು / ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯ ಎಂದು ತೀರ್ಮಾನಿಸಿ ಪ್ರಕರಣ ಇತ್ಯರ್ಥ ಪಡಿಸಲಾಗವುದು ತಿಳಿಯಿರಿ.

ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 03.04.2024 ರಂದು ನೀಡಲಾಗಿದೆ.

**ವಾದಿಯರ ಪರ ವಕೀಲರು**
**ಬಸವರಾಜ ಓಂಕಾರಿ**
**ವಕೀಲರು, ಹರಿಹರ**

**ನ್ಯಾಯಾಲಯದ ಆದೇಶದ ಮೇರೆಗೆ**
**ಶಿರಸ್ತೇದಾರರು**
**ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ**

## ಎಡಿಸಿ ಸೇರಿ 228 ಅಧಿಕಾರಿಗಳು ಅಂಚೆ ಮತದಾನ




ದಾವಣಗೆರೆ, ಮೇ 2- ಚುನಾವಣಾ ಕರ್ತವ್ಯ ನಿರತರಾದ ಅಪರ ಜಿಲ್ಲಾಧಿಕಾರಿ ಸೇರಿದಂತೆ 228 ಹೊರ ಜಿಲ್ಲೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನಗರದ ಸ್ಮಾರ್ಟ್‌ಸಿಟಿ ಕಟ್ಟಡದಲ್ಲಿ ಬುಧವಾರ ಅಂಚೆ ಮತದಾನ ಮಾಡಿದರು.

ಅಗತ್ಯ ಸೇವಾ ಇಲಾಖೆಯ ಮತದಾರರು ಮತ್ತು ಚುನಾವಣಾ ಕರ್ತವ್ಯ ನಿರತರಿಗೆ ಮೇ.3ರ ವರೆಗೆ ಅಂಚೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ.

ದಾವಣಗೆರೆ ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಕರ್ತವ್ಯ ಮಾಡುತ್ತಿರುವ 901 ಮತದಾರರು ಅಂಚೆ ಮತದಾನಕ್ಕಾಗಿ 12ಡಿ ರಡಿ ಘೋಷಣೆ ಮಾಡಿದ್ದರು. ಈ ನಿಟ್ಟಿನಲ್ಲಿ ಮೇ.1 ರಂದು ಅಗತ್ಯ ಸೇವಾ ಇಲಾಖೆಯ 153 ಮತದಾರರು ಅಂಚೆ ಮತದಾನ ಮಾಡಿದ್ದಾರೆ.

ಕರ್ತವ್ಯ ನಿರತ 1,128 ಮತದಾರರಲ್ಲಿ 75 ಅಧಿಕಾರಿಗಳು ಮತ್ತು ಸಿಬ್ಬಂದಿ ಮೇ.01 ರಂದು ಮತದಾನ ಮಾಡಿದರು. ಬೆಳಗಾವಿ ಲೋಕಸಭಾ ಕ್ಷೇತ್ರದ ಮತದಾರರಾದ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಬಾನು ಚುನಾವಣಾ ಕರ್ತವ್ಯದಲ್ಲಿ ತೊಡಗಿರುವುದರಿಂದ ಅಂಚೆ ಸೌಲಭ್ಯದಿಂದ ಮತದಾನ ಮಾಡಿದರು.

ಧಾರವಾಡ ಲೋಕಸಭಾ ಕ್ಷೇತ್ರದ ಮತದಾರರಾದ ಭೂ ಮಾಪನ ಇಲಾಖೆಯ ಉಪನಿರ್ದೇಶಕರು ಹಾಗೂ ಹರಿಹರ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಭಾವನಾ ಅವರು ಅಂಚೆ ಮತದಾನದ ಮೂಲಕ ಮತ ಚಲಾಯಿಸಿದರು.

## ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ

### ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯ್‌ಕುಮಾರ್



ದಾವಣಗೆರೆ, ಮೇ 2- ದಾವಣಗೆರೆ ಲೋಕಸಭೆ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯ ಕನಸಿನಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇನೆ ಎಂದು ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ತಾಲ್ಲೂಕಿನ ದೊಗ್ಗಳ್ಳಿ, ದೊಡ್ಡ ಬೂದಿಹಾಳ್, ಅರಸಾಪುರ, ಕೋಡಿಹಳ್ಳಿ, ಚಿಕ್ಕಬೂದಿಹಾಳು, ದೊಡ್ಡಬಾತಿ ಸೇರಿದಂತೆ ಹಲವು ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿ ಅವರು ಮಾತನಾಡಿದರು.

ನಾನು ಗೆದ್ದರೆ ಜಿಲ್ಲೆಗೆ ಐಟಿ-ಬಿಟಿ, ಫುಡ್ ಪ್ರೊಸೆಸಿಂಗ್ ಘಟಕಗಳು, ಆಗ್ರೋ ಇಂಡಸ್ಟ್ರೀಸ್, ಬೆಳೆಗಳ ಸಂಶೋಧನಾ ಕೇಂದ್ರ, ಅಡಿಕೆ ಸಂಬಂಧಿತ ಕೈಗಾರಿಕೆಗಳು, ಮತ್ತು ದ್ರಾವಿಡ್ ಪ್ರಕಾಶ್ ಪಡುಕೋಣೆ ಅಕಾಡೆಮಿ ಮಾದರಿಯಲ್ಲಿ ಅಕಾಡೆಮಿ ಸ್ಥಾಪಿಸುವ ಗುರಿ ಹೊಂದಿದ್ದೇನೆ ಎಂದು ವಿವರಿಸಿದರು.

ಜವಳಿ ಪಾರ್ಕ್, ಟೆಕ್ಸ್ ಟೈಲ್ಸ್ ಉದ್ಯಮಕ್ಕೆ ಉತ್ತೇಜನ, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ, ಏತ ನೀರಾವರಿ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತಗೊಳಿಸಲು ನನ್ನನ್ನು ಲೋಕಸಭೆಗೆ ಕಳುಹಿಸಿ ಎಂದು ಮನವಿ ಮಾಡಿದರು. ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ಹೋರಾಟದಲ್ಲಿ ಪಕ್ಷೇತರ ಅಭ್ಯರ್ಥಿಗೆ ಲಾಭ ಎಂಬುದು ಜನರ ಭಾವನೆಯಾಗಿದೆ. ಆದರೆ ನಾನು ನನ್ನದೇ ತತ್ವ-ಸಿದ್ಧಾಂತದಲ್ಲಿ ಜಿಲ್ಲೆಯ ಅಭಿವೃದ್ಧಿಯ ಧ್ಯೇಯ ಇಟ್ಟುಕೊಂಡಿದ್ದೇನೆ ಎಂದರು.

ಈ ವೇಳೆ ದೊಡ್ಡಬೂದಿಹಾಳ್ ಗ್ರಾಮದ ಸಿದ್ದಪ್ಪ, ಮುರುಗೇಶ್, ಚಂದ್ರಪ್ಪ, ಈಶಣ್ಣ, ಗೌಡ್ರು, ಸಿದ್ಧಬಸಪ್ಪ, ಕುಮಾರ್, ಪ್ರವೀಣ್ ಕುಮಾರ್, ಸೋಮಣ್ಣರ ಬಸಣ್ಣ, ಗಿರೀಶ್, ಹನುಮಂತಣ್ಣ, ಚಿಕ್ಕಬೂದಿಹಾಳು ಗ್ರಾಮದ ಹನುಮಂತಪ್ಪ, ರುದ್ರಪ್ಪ, ಪ್ರಕಾಶ್, ಸಣ್ಣ ರುದ್ರಪ್ಪ, ಪ್ರಕಾಶ್, ಅನಂತ, ಮಹೇಶ್, ಗಿರೀಶ್, ಬಸವರಾಜ್, ಅಣ್ಣಪ್ಪ, ಕೋಡಿಹಳ್ಳಿ ಗ್ರಾಮದ ಆನಂದ್, ಕುಮಾರ್, ದುರುಗೇಶ್, ಹರೀಶ್, ಮಧು, ಪ್ರದೀಪ್ ಮತ್ತು ಇತರರಿದ್ದರು.

## ಜಿಲ್ಲಾ ಕಾಂಗ್ರೆಸ್‌ಗೆ ಉಪ್ಪಾರ ಸಮಾಜ ಬೆಂಬಲ



ದಾವಣಗೆರೆ, ಮೇ 2 - ನಗರದ ಜಿಲ್ಲಾ ಕಾಂಗ್ರೆಸ್ ಪಕ್ಷದ ಉಪ್ಪಾರ ಮುಖಂಡರು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸಭೆಯನ್ನು ನಡೆಸಿ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಲು ತೀರ್ಮಾನಿಸಿದರು. ಈ ಸಭೆಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಆಹ್ವಾನಿಸಿದ ಉಪ್ಪಾರ ಸಮಾಜದ ಮುಖಂಡರು ಡಾ. ಪ್ರಭಾ ಮಲ್ಲಿಕಾರ್ಜುನ್ ರವರನ್ನು ಬೆಂಬಲಿಸಲಾಗುವುದು ಎಂದು ತಿಳಿಸಿದರು.



## ಗಾಯತ್ರಿ ಸಿದ್ದೇಶ್ವರ ಪರವಾಗಿ ಲೋಕಿಕೆರೆ ನಾಗರಾಜ್ ಮತಯಾಚನೆ

ದಾವಣಗೆರೆ, ಮೆ 1 - ಉತ್ತರ ವಿಧಾನಸಭಾ ಕ್ಷೇತ್ರದ 30ನೇ ವಾರ್ಡ್‌ನ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಪರವಾಗಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಅವರು ಸ್ಥಳೀಯ ಮುಖಂಡರು, ಕಾರ್ಯಕರ್ತರೊಂದಿಗೆ ಮನೆ ಮನೆಗೆ ಭೇಟಿ ನೀಡಿ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಎನ್.ಹೆಚ್ ಹಾಲೇಶ್, ಅಜ್ಜನ ಗೌಡ್ರು, ವಾಟರ್ ಮಂಜುನಾಥ್, ಮಲ್ಲಿಕಾರ್ಜುನ, ರುದ್ರೇಶ್, ಬಸಣ್ಣ, ರಾಜಣ್ಣ, ಕಲ್ಲಪ್ಪ ಎ.ಎಸ್., ಚಂದ್ರಪ್ಪ, ಮಂಜುನಾಥ್, ಸುರೇಶ್, ಮುರುಗೇಶ್, ಶ್ರೀಧರ್ ಉಪಸ್ಥಿತರಿದ್ದರು.

## ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಎಕ್ಕೆಗೊಂದಿ ಗ್ರಾಮದ ಬಿಜೆಪಿ ಮುಖಂಡರು



ದಾವಣಗೆರೆ, ಮೇ 2- ಹರಿಹರ ತಾಲ್ಲೂಕಿನ ಎಕ್ಕೆಗೊಂದಿ ಗ್ರಾಮದ ಬಿಜೆಪಿ ಹಾಗೂ ನೊಳಂಬ ವೀರಶೈವ ಸಮಾಜದ ಮುಖಂಡರುಗಳು ಮಲೆಬೆನ್ನೂರು ವಾಗೀಶಸ್ವಾಮಿ ಅವರ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್ ಮಲ್ಲಿಕಾರ್ಜುನ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಈ ಸಂದರ್ಭದಲ್ಲಿ ಮಾಜಿ ಗ್ರಾಮ ಪಂಚಾಯ್ತಿ ಸದಸ್ಯ ಜಿ.ಎಂ ಪ್ರಕಾಶ್, ವೈ.ಎಸ್. ಜಯಪ್ಪ, ಬಿ.ಜಿ. ಶಿವರಾಜ್, ಬಿ.ವೈ. ರಾಜ, ಮಹಾದೇವ್, ಬಸವನಗೌಡ, ರುದ್ರಾಗೌಡ, ಗದಿಗೆಪ್ಪ, ಬಡೇನ್ ಆಹಮ್ಮದ್, ಬಸವರಾಜ್, ಭೀಮನಗೌಡ, ಅಲ್ಲಾಭಕ್ಷಿ, ಹನುಮಗೌಡ ಸೇರಿದಂತೆ ಇತರರಿದ್ದರು.

## ಜಿ.ಬಿ. ವಿನಯ್ ಕುಮಾರ್ ನೀನು ಗೆದ್ದೇ ಗೆಲ್ತೀಯಾ : ಗೊರವಯ್ಯ ಭವಿಷ್ಯ



ಹರಿಹರ, ಮೇ 2 - ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಈ ಬಾರಿ ನೀನು ಗೆದ್ದೇ ಗೆಲ್ಲುತ್ತೀಯಾ ಎಂದು ಗೊರವಯ್ಯ ಅವರು ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್‌ಗೆ ಅಭಯ ನೀಡಿದರು.

ಬನ್ನಿಕೋಡು ಗ್ರಾಮದಲ್ಲಿ ಚುನಾವಣಾ ಪ್ರಚಾರಕ್ಕೆ ಜಿ. ಬಿ. ವಿನಯ್ ಕುಮಾರ್ ಅವರು ಆಗಮಿಸಿದ್ದ ವೇಳೆ ಎದುರಾದ ಗೊರವಯ್ಯ ಈ ಬಾರಿ ಕ್ಷೇತ್ರದಲ್ಲಿ ಬದಲಾವಣೆ ಆಗುವ ಮುನ್ಸೂಚನೆ ಇದೆ. ಜಯ ಸಿಕ್ಕೇ ಸಿಗುತ್ತದೆ. ನಿನ್ನ ಕೆಲಸ ನೀನು ಮುಂದುವರಿಸು. ಈಗಾಗಲೇ ಜನರ ಪ್ರೀತಿ, ವಿಶ್ವಾಸ ಸಂಪಾದನೆ ಮಾಡಿದ್ದೀಯಾ. ಎಲ್ಲಾ ಕಡೆಗಳಲ್ಲಿಯೂ ಚರ್ಚೆಯಾಗುತ್ತಿದೆ ಎಂದು ಗೊರವಯ್ಯ ಅವರು ಹೇಳಿದರು.

ಬನ್ನಿಕೋಡು ಗ್ರಾಮದಲ್ಲಿ ವಿನಯ್ ಕುಮಾರ್ ಜೊತೆ ಸ್ವಲ್ಪ ಹೊತ್ತು ಮಾತುಕತೆ ನಡೆಸಿದ ಗೊರವಯ್ಯ ಅವರು ಈ ಭವಿಷ್ಯ ಹೇಳುತ್ತಿದ್ದಂತೆ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು, ಗ್ರಾಮಸ್ಥರು ಪಕ್ಷೇತರ ಅಭ್ಯರ್ಥಿ ಪರ ಜೈಕಾರ ಹಾಕಿದರು. ಘೋಷಣೆಗಳನ್ನು ಕೂಗಿ ಸಂತಸಪಟ್ಟರು.

ನಿನ್ನಲ್ಲಿ ಸಾಮರ್ಥ್ಯ ಇದೆ. ಶಕ್ತಿ ಇದೆ. ಹೋರಾಡುವ ಛಲ ಇದೆ. ನೀನು ಗೆದ್ದರೆ ಹೊಸ ಭವಿಷ್ಯಕ್ಕೆ ನಾಂದಿ ಹಾಡಿದಂತಾಗುತ್ತದೆ. ಸಂಬಂಧಿಕರು, ಸ್ನೇಹಿತರು, ಹಿತೈಷಿಗಳು ಬೆಂಬಲ ನೀಡಿದ್ದಾರೆ. ಗೆಲುವಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಚುನಾವಣೆ ಎದುರಿಸುವ ಎಲ್ಲಾ ರೀತಿಯ ಸಾಮರ್ಥ್ಯ ಕಂಡು ಬರುತ್ತಿದೆ. ಮುಖದಲ್ಲಿ ಗೆಲುವಿನ ವಿಶ್ವಾಸ ಕಾಣುತ್ತಿದೆ. ಮುಂದಿಟ್ಟ ಹೆಜ್ಜೆ ಹಿಂದೆ ಇಡಬೇಡ. ಮುಂದುವರಿ. ಖಂಡಿತವಾಗಿಯೂ ಬೀರಲಿಂಗೇಶ್ವರ ಆಶೀರ್ವಾದ ಮಾಡುತ್ತಾನೆ. ಗೆಲುವು ನಿನ್ನದಾಗುತ್ತದೆ ಎಂದು ಗೊರವಯ್ಯ ಹೇಳಿದರು.

## ರಾಜಸ್ಥಾನಿ ಸಮಾಜದ ಸದಸ್ಯರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ





ದಾವಣಗೆರೆ, ಮೇ 2- ಶಾಸಕ ಶಾಮನೂರು ಶಿವಶಂಕರಪ್ಪ ಅವರ ಸಮ್ಮುಖದಲ್ಲಿ ದಾವಣಗೆರೆಯ ರಾಜಸ್ಥಾನಿ ಸಮಾಜದ ಸದಸ್ಯರುಗಳು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾದರು. ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರಿದ ರಾಜಸ್ಥಾನಿ ಸಮಾಜದ ಸದಸ್ಯರುಗಳು: ದಳಪತ್ ಸಿಂಗ್, ಚಿರಾಗ್, ಮುಖೇಶ್, ವಸಂತ ಭೋಟಿ, ವಿಮಲ್, ದಿನೇಶ್, ಮೋಹನ್, ಶೇಖರ್, ಸಂತೋಷ ಪುರೋಹಿತ, ಜಯಂತ್, ಅಶೋಕ, ದಕ್ಷ, ವಿಕಾಸ್, ಪ್ರವೀಣ್, ಅಮೃತ ಭಂಡಾರಿ, ಅನಿಲ್, ಕಿಶೋರ್ ಮಲ್, ನಿತಿನ್ ಕುಮಾರ್, ಗೋಪಾಲ್ ಸಿಂಗ್, ಗಣಪತ್ ಸಿಂಗ್, ರಾಕೇಶ್, ಮಹೇಂದ್ರ, ಸುರೇಶ್ ಲಕ್ಕಡ್, ಮಹಾವೀರ ಜೈನ, ಗೌರವ ಜೈನ, ದೀಕ್ಷಿತ ಜೈನ, ನರಪತ್ ಸಿಂಗ್, ಜಯರಾಮ, ಬಲರಾಮ್, ಅನಿಲ್ ಸೊಳಂಕಿ ರಾಠೋಡ್, ಪ್ರಕಾಶ್, ಧನುಶ್, ನಿಖಿಲ್, ಜೀತು, ರಮೇಶ, ಶ್ರೇಯಸ್, ಅಕ್ಷತ್ ಎಸ್.ಜೈನ್. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸಾವನ್ ಜೈನ್, ರಾಜು ಭಂಡಾರಿ, ದಿನೇಶ್ ಕೆ. ಶೆಟ್ಟಿ, ಶ್ರೀಕಾಂತ್ ಬಗೇರ ಇದ್ದರು.

## ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ



ದಾವಣಗೆರೆ, ಮೇ 2- ಸಂಸದ ಜಿ.ಎಂ.ಸಿದ್ದೇಶ್ವರ್ ಸಮ್ಮುಖದಲ್ಲಿ ಚನ್ನಗಿರಿ ತಾಲ್ಲೂಕಿನ ಕಂಪನಹಳ್ಳಿಯ ಹನುಮಂತ, ಮಹಾಂತೇಶ್ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ದಿಶಾ ಕಮಿಟಿ ಸದಸ್ಯ ಮೆದಿಕೆರೆ ಸಿದ್ದೇಶ್ ಇದ್ದರು.

## ಪಾಲಿಕೆ ಮಾಜಿ ಸದಸ್ಯ ಜೆಡಿಎಸ್‌ನ ಶೇಕ್ ಅಹ್ಮದ್ ಕಾಂಗ್ರೆಸ್‌ಗೆ ಸೇರ್ಪಡೆ



ದಾವಣಗೆರೆ, ಮೇ 1- ಇಲ್ಲಿನ ಮಹಾನಗರ ಪಾಲಿಕೆಯ ಜೆಡಿಎಸ್ ಪಕ್ಷದ ಮಾಜಿ ಸದಸ್ಯ ಶೇಕ್ ಆಹ್ಮದ್ ಅವರು ಜೆಡಿಎಸ್ ಪಕ್ಷವನ್ನು ತೊರೆದು ಎಸ್.ಎಸ್ ಮಲ್ಲಿಕಾರ್ಜುನ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಮಹಮ್ಮದ್ ಸಮೀವುಲ್ಲ ಮತ್ತಿತರರು ಹಾಜರಿದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು : - ಡಿ. ವಿ.ಎಸ್. ಅರುಣಾಚಲ ಶೆಟ್ರು (ವಕೀಲರು) ಶ್ರೀ ಮಾತಾ ಟ್ರಸ್ಟ್ ಸಂಸ್ಥಾಪಕರು, ಇವರ ಜ್ಞಾಪಕಾರ್ಥವಾಗಿ ಶ್ರೀ ಹರ್ಷ, (ಲೆಕ್ಕ ಪರಿಶೋಧಕರು) ಮತ್ತು ಕುಟುಂಬ ವರ್ಗದವರ ಸೇವಾರ್ಥ, ದಾವಣಗೆರೆ.
ಸ್ಥಳ : ಮಹಾನಗರ ಪಾಲಿಕೆ ಆವರಣ

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನದ ಹಿಂಭಾಗ 30x40, 30x40 East ಅಕ್ಕ-ಪಕ್ಕ, 60x40 East, Rate - 2600/-
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬಂಕರ್ಸ್ ಕಾಟ್‌ಗಳು ಬೇಕಾಗಿವೆ**
ಹಾಸ್ಟೆಲ್‌ಗಳಲ್ಲಿ ಬಳಸುವ ಬಂಕರ್ಸ್ ಕಾಟ್‌ಗಳು ಬೇಕಾಗಿವೆ. ಯಾರ ಬಳಿ ಇದ್ದರೂ ಈ ಕೆಳಗಿನ ವಾಟ್ಸಪ್ ನಂಬರ್‌ಗೆ ಸಂಪರ್ಕಿಸಿ.
77954 33755, 9742783430

**Property Hub**
• EC
• E-swathu
• Building Licence
• Khatha Change
96118 66449

**ಮಾರಾಟಕ್ಕಿದೆ**
ಇಟ್ಟಿಗೆ ಮಾಡಲು ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ.
ಬೇಕಾದವರು ವಿಚಾರಿಸಿ
73533 36533

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ಬಾಡಿಗೆಗೆ ಇದೆ**
ಐಗೂರು ಗ್ರಾಮದ ತುಂಬಿಗೆರೆ ರಸ್ತೆಯಲ್ಲಿ ಇರುವ 2 ಎಕರೆ ಜಮೀನಿನಲ್ಲಿ 1 ಎಕರೆ ಜಮೀನು NA (ಕೈಗಾರಿಕ ವಲಯ) ಆಗಿದೆ. ಇದು ಬಾಡಿಗೆಗೆ ದೊರೆಯುತ್ತದೆ. ಮತ್ತು ಆ ಜಮೀನಿನಲ್ಲಿ ಸಿಮೆಂಟ್ ಬ್ರಿಕ್ಸ್ ಕಾರ್ಖಾನೆಯು ಬಾಡಿಗೆಗೆ ಇದೆ.
9036559096, 9242837951

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕೆಲಸಕ್ಕೆ ಬೇಕಾಗಿದ್ದಾರೆ**
1) ANM/GNM ನರ್ಸಿಂಗ್-01
2) ಆಯಾ ಕೆಲಸ - 01
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ನೇರ ಸಂದರ್ಶನಕ್ಕೆ ಸಂಪರ್ಕಿಸಿ
86186 42929
08192-252228

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮಹಿಳಾ ಅಭ್ಯರ್ಥಿ Office Work**
ಕಛೇರಿ ಕೆಲಸಕ್ಕೆ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ತಿಂಗಳ ವೇತನ 8,000/-. ಊಟ, ವಸತಿ ಉಚಿತ.
99456 82243
ನಿಟುವಳ್ಳಿ, ದಾವಣಗೆರೆ.

ಸಂಘ ಸಂಸ್ಥೆಗಳ, ಟ್ರಸ್ಟ್‌ಗಳ, ಫೈನಾನ್ಸ್‌ಗಳ, GST & INCOME TAX ನೋಂದಣಿ ನವೀಕರಣ ಮಾಡಿಕೊಡುತ್ತೇವೆ.
ಮೊ. 94838 62779

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಬೇಕಾಗಿದ್ದಾರೆ**
ಬಿ.ಎಸ್ಸಿ., ಬಿ.ಇಡಿ. (ವಿಜ್ಞಾನ, ಗಣಿತ) ಬಿ.ಎ., ಬಿ.ಇಡಿ. (ಕನ್ನಡ, ಇಂಗ್ಲೀಷ್, ಹಿಂದಿ, ಸಮಾಜ) ಹಾಗೂ ಬಿಎಸ್ಸಿ., ಬಿ.ಎ. ತರಬೇತಿ ಪಡೆದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲಮಾಧ್ಯಮ ನರ್ಸರಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಹೊಸ ಆರ್‌ಟಿಓ ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ಅಡುಗೆಯವರು ಬೇಕಾಗಿದ್ದಾರೆ**
ಎಸ್.ಎಸ್. ಲೇ ಔಟ್ - ಎ ಬ್ಲಾಕ್, ಅಥಣಿ ಕಾಲೇಜು ಪಕ್ಕ, ಮನೆಯೊಂದಕ್ಕೆ ಉತ್ತಮ ವೇತನ ನೀಡಲಾಗುವುದು. 10,000/- ದಿಂದ 15,000/-
ವೆಜ್ / ನಾನ್ ವೆಜ್
ಉಡುಪಿ, ಮಂಗಳೂರು ಶೈಲಿಯಲ್ಲಿ ಅಡುಗೆ ಮಾಡುವವರಿಗೆ ಪ್ರಾಧಾನ್ಯತೆ ನೀಡಲಾಗುವುದು.
ಸಮಯ : ಬೆಳಿಗ್ಗೆ 8 ರಿಂದ 4 ಗಂಟೆ
81475 67611

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ**
ಗಂಡ-ಹೆಂಡತಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 25,000 ರೂ. ಇಬ್ಬರಿಂದ ರೂಂ ಮತ್ತು ಗ್ಯಾಸ್ ಉಚಿತ.
97400 98047

**ಕೆಲಸಕ್ಕೆ ಬೇಕಾಗಿದ್ದಾರೆ**
ladies - Tally, Marketing Jobಗೆ salary 9000,
Boys -Field Work Jobಗೆ 14,000 salary
MCC B Block, 5th Main 5th Cross, Davangere.
95917 50723, 78999 51681

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 20-35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಗೋಡಾನ್ ಬಾಡಿಗೆಗಿದೆ**
ಬಸಾಪುರ ರೋಡ್, ದಾವಣಗೆರೆ. 45x110 ಅಳತೆ. ಸಂಪರ್ಕಿಸಿ :
98868 51313
9448345599

**ಸುವರ್ಣಾವಕಾಶ MG ಗೋಲ್ಡ್ ಕಂಪನಿ**
ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಅಥವಾ ನೀವು ಅಡವು ಇಟ್ಟ ನಿಮ್ಮ ಚಿನ್ನ ಆಭರಣಗಳನ್ನು ಬಿಡಿಸಿ, ಇಂದಿನ ಸೂಕ್ತ ಬೆಲೆಗೆ ತೆಗೆದುಕೊಳ್ಳುತ್ತೇವೆ
ಮೊ.: 9343546891, 7019426891

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

ರಕ್ತ ದಾನ ಶ್ರೇಷ್ಠ ದಾನ

**Required Office Staff**
In Pre School
2 year Experience
83100 69167
91108 76631

**SSLC / PUC PASS or FAIL**
ಅದರೂ ಕಾಲೇಜಿಗೆ ಸೇರಬಹುದು. ಡಿಪ್ಲೊಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ಶ್ರೀ ಗಂಗೋತ್ರಿ ಹೆಲ್ತ್ ಅಲೈಡ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ ದಾವಣಗೆರೆ.
86602 35013
(ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ.)

**ಮಾರಾಟಕ್ಕಿದೆ**
ಉತ್ತಮ ಗುಣಮಟ್ಟದ ಉಪಯೋಗಿಸಿ ತೆಗೆದ ರೋಲಿಂಗ್ ಷಟರ್ಸ್ ಮಾರಾಟಕ್ಕಿದೆ. ಅಳತೆ 2'6'x8, 4'x8, 4 1/4'x8'
81519 83456

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಕೆಲಸಕ್ಕೆ ಬೇಕಾಗಿದ್ದಾರೆ.
ಆಕರ್ಷಕ ಸಂಬಳ, ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
1) ಅಕೌಂಟೆಂಟ್ (Accountant)
2) ಕ್ಯಾಷಿಯರ್ (Cashiers)
3) ಸಪ್ಲೈಯರ್ಸ್ (Suppliers)
ಅನುಭವ ಉಳ್ಳವರಿಗೆ ಮೊದಲ ಆದ್ಯತೆ.
96060 96697
88846 30532 96067 45754

**ಮಳಿಗೆಗಳು ಬಾಡಿಗೆಗಿವೆ**
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಆಸಕ್ತರು ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ...
ಮಂಡಿಪೇಟೆ, ದಾವಣಗೆರೆ.
96865 51303
99806 29965

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್‌ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
ವಾಟ್ಸಪ್ ನಂಬರ್ 8971119130
ಮೊ : 98800 42597

**ಬೇಕಾಗಿದ್ದಾರೆ**
ಡ್ರೈವರ್ ಮತ್ತು ಗಾರ್ಡನ್ ಕೆಲಸಕ್ಕೆ ಪುರುಷ ಅಥವಾ ಮಹಿಳೆ ಬೇಕಾಗಿದ್ದಾರೆ.
ವಿದ್ಯಾನಗರ
99162 36521

**WANTED**
Diploma or ITI ಆದ ಯುವಕರು ಸರ್ವೀಸ್ ಇಂಜಿನಿಯರ್ ಉದ್ಯೋಗಕ್ಕೆ ಬೇಕಾಗಿದ್ದಾರೆ. ಆಸಕ್ತರು ಈ ಕೆಳಕಂಡ ವಿಳಾಸಕ್ಕೆ ತಮ್ಮ Resume ಮೂಲಕ ಬಂದು ಭೇಟಿಯಾಗಬಹುದು.
Power Green Electricals, PB Road, Near Onion Market, Opp. Sultan Gold Palace, Davanagere.
93539 96363, 90717 37706

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಹಿಂದುಳಿದ ಸಮಾಜಕ್ಕೆ ಬಿಜೆಪಿ ಅನ್ಯಾಯ



ಜಗಳೂರಿನ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದ ಕೆ. ಮುಕುಡಪ್ಪ

ಜಗಳೂರು, ಮೇ 2 - ರಾಜ್ಯದಲ್ಲಿ ಮೂರನೇ ಬಹುದೊಡ್ಡ ಸಂಖ್ಯೆಯಲ್ಲಿರುವ ಕುರುಬ ಸಮಾಜಕ್ಕೆ ಲೋಕಸಭಾ ಚುನಾವಣೆಯಲ್ಲಿ ಒಂದೂ ಟಿಕೆಟ್ ನೀಡದೆ ಬಿಜೆಪಿ ಅನ್ಯಾಯ ಎಸಗಿದೆ ಎಂದು ಹಿಂದುಳಿದ ದಲಿತ ವರ್ಗಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಮುಕುಡಪ್ಪ ಆರೋಪ ಮಾಡಿದ್ದಾರೆ.

ಪಟ್ಟಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಪಕ್ಷ ಒಂದು ಜಾತಿ ಅವಲಂಭಿಸಿ ರಾಜಕಾರಣ ಮಾಡುವುದು ಆ ಪಕದ್ಷಕ್ಕೆ ಆತ್ಮಹತ್ಯೆ ದಾರಿ ಹಿಡಿದಂತೆ. ಈ ಹಾದಿಯಲ್ಲಿ ಕಾರ್ಯಕರ್ತರು ಕಟ್ಟಿದ ಬಿಜೆಪಿ ಸಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಲಿಂಗಾಯತ ಜನಾಂಗದವರಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡಿ ಕುರುಬರು ಹಾಗೂ ಹಿಂದುಳಿದವರನ್ನು ಕಡೆಗಣಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಬಿ.ಎಸ್. ಯಡಿಯೂರಪ್ಪ ಅವರ ಧೃತರಾಷ್ಟ್ರ ಪ್ರೇಮ ಎಂದು ದೂರಿದರು.

ತನ್ನ ಮಕ್ಕಳಿಗೆ ರಾಜಕಾರಣದಲ್ಲಿ ಶಾಶ್ವತವಾಗಿ ನೆಲೆ ಒದಗಿಸುವ ದುರುಪಯೋಗಶದಿಂದ ತನ್ನೊಂದಿಗೆ ಪಕ್ಷ ಕಟ್ಟಲು ಶ್ರಮಿಸಿದ ಈಶ್ವರಪ್ಪ ಹಾಗೂ ಪಕ್ಷದ ನಿಷ್ಠರಾದ ಸಿ.ಟಿ.ರವಿ, ಬಸವನಗೌಡ ಪಾಟೀಲ ಯತ್ನಾಳ್ ಸೇರಿದಂತೆ ಹತ್ತಾರು ಪ್ರಬಲ ನಾಯಕರನ್ನು ರಾಜಕೀಯವಾಗಿ ಮುಗಿಸಲು ಮುಂದಾಗಿದ್ದಾರೆ ಎಂದರು.

ಕರ್ನಾಟಕದ ಎಲ್ಲ ಕಡೆ ಹರಡಿರುವ ನಾಲ್ಕು ಅತೀ ಜನಸಂಖ್ಯೆ ಇರುವ ಜನಾಂಗಗಳು ಲಿಂಗಾಯಿತ, ಒಕ್ಕಲಿಗ, ಪರಿಸಿಷ್ಟ ಜಾತಿ - ಪಂಗಡ ಮತ್ತು ಹಿಂದುಳಿದ ಕುರುಬ ಜಾತಿ.

ಮಂಡಲ ವರದಿಯನ್ನು ಸುಪ್ರೀಂ ಕೋರ್ಟ ಒಪ್ಪಿದ ಪ್ರಕಾರ, ಹಿಂದುಳಿದ ದಲಿತ ಜನಸಂಖ್ಯೆ 58%, ಇತರೆ 42%. ಇದರಲ್ಲಿ ಪರಿಸಿಷ್ಟ ಜಾತಿ - ಪಂಗಡ 25%, ಕುರುಬ, ಗೊಲ್ಲ, ಉಪ್ಪಾರ, ಈಡಿಗ, ತಿಗಳ, ಮಡಿವಾಳ, ಸವಿತಾ ಇತ್ಯಾದಿ ಹಿಂದುಳಿದವರು ಶೇ 33ರಷ್ಟು ಇದೆ.

ಈ ಜಾತಿ ಜನಸಂಖ್ಯೆ ಆಧಾರದ ಮೇಲೆ ಈಗ ನಡೆಯುತ್ತಿರುವ 28 ಲೋಕಸಭಾ ಚುನಾವಣೆಯಲ್ಲಿ ಲಿಂಗಾಯಿತರಿಗೆ 4 ಸ್ಥಾನ; ಒಕ್ಕಲಿಗರಿಗೆ 3 ಸ್ಥಾನ; ಹಿಂದುಳಿದವರಿಗೆ 9 ಸ್ಥಾನ (ಕುರುಬರಿಗೆ 3 , ಯಾದವ, ಉಪ್ಪಾರ, ಈಡಿಗ, ತಿಗಳ ಇತ್ಯಾದಿಗಳಿಗೆ 6 ಸ್ಥಾನ ); ಬ್ರಾಹ್ಮಣ, ಮರಾಠ, ಅರಸು ಇತ್ಯಾದಿ 2 ಸ್ಥಾನ ; ಮುಸ್ಲಿಂ-ಕ್ರಿಸ್ತ 3 ಸ್ಥಾನ ಮತ್ತು ಪರಿಸಿಷ್ಟ ಜಾತಿ-ಪಂಗಡ 7 ಸ್ಥಾನ ಹಂಚಬೇಕಾಗಿತ್ತು ಎಂದು ಹೇಳಿದರು.

ಆದರೆ ಬಿಜೆಪಿ ಸರ್ಕಾರ ಹಿಂದುಳಿದ ವರ್ಗದಲ್ಲಿ ಎಲ್ಲ ಸಮುದಾಯಗಳಿಗೆ ಅದರಲ್ಲೂ ಕುರುಬರಿಗೆ ತೀವ್ರ ವಂಚನೆ ಮಾಡಿದೆ. ಜೊತೆಗೆ ಲಿಂಗಾಯತ ಸಮುದಾಯಲ್ಲಿ ಗೆಲ್ಲುವ ವ್ಯಕ್ತಿಗಳಿಗೆ ಟಿಕೆಟ ತಪ್ಪಿಸಿ ಪಕ್ಷಕ್ಕೆ ಸಣ್ಣ ಸೇವೆಯನ್ನೇ ಸಲ್ಲಿಸಿದ ಸೋಲುವ ಗಾಯತ್ರಿ ಸಿದ್ದೇಶ್ವರ ಅಂತಹವರಿಗೆ ಮಣೆ ಹಾಕಲಾಗಿದೆ ಎಂದು ಬೇಸರಿಸಿದರು.

ಅದರಲ್ಲೂ ಶಿವಮೊಗ್ಗದಲ್ಲಿ ಬಿ.ಎಸ್.ವೈ ಮಕ್ಕಳ ಉಪಟಳಕ್ಕೆ ದಾವಣಗೆರೆಯಲ್ಲಿ ಜಿ. ಎಂ.ಸಿದ್ದೇಶ್ವರ ಅಹಂಕಾರಕ್ಕೆ ಮನನೊಂದಿರುವ ಬಿಜೆಪಿ ಕಾರ್ಯಕರ್ತರು, ಮುಖಂಡರು ಬಿ.ವೈ. ರಾಘವೇಂದ್ರ, ಗಾಯತ್ರಿ ಸಿದ್ದೇಶ್ವರ ಸೋಲಿಗೆ ಪಣ ತೊಟ್ಟಿದ್ದಾರೆ. ಆದ್ದರಿಂದ ಹಿಂದ ಸಮುದಾಯದವರು ಶಿವಮೊಗ್ಗದಲ್ಲಿ ಕೆ. ಎಸ್. ಈಶ್ವರಪ್ಪ, ದಾವಣಗೆರೆಯಲ್ಲಿ ಜಿ. ಬಿ.ವಿನಯಕುಮಾರ್ ಅವರನ್ನು ಗೆಲ್ಲಿಸಿಕೊಳ್ಳುವ ಮೂಲಕ ಶಕ್ತಿ ಪ್ರದರ್ಶನ ಮಾಡಬೇಕು ಎಂದರು.

ಶಿವಮೊಗ್ಗದಲ್ಲಿ ಗೀತಾ ಶಿವರಾಜಕುಮಾರ ಮತ್ತು ಈಶ್ವರಪ್ಪ, ದಾವಣಗೆರೆಯಲ್ಲಿ ಪ್ರಭಾ ಮಲ್ಲಿಕಾರ್ಜುನ ಮತ್ತು ಜಿ.ಬಿ.ವಿನಯ್ ಕುಮಾರ್ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದ್ದು, ಈ ಎರಡು ಕ್ಷೇತ್ರದಲ್ಲಿ ಬಿಜೆಪಿ ಹೀನಾಯ ಸೋಲು ಅನುಭವಿಸಲಿದೆ ಎಂದು ಹೇಳಿದರು.

# ದ್ವೈವಾರ್ಷಿಕ ವಿಧಾನ ಪರಿಷತ್ ಚುನಾವಣೆ

**ರಾಜ್ಯದ 6 ವಿಧಾನ ಪರಿಷತ್ ಸ್ಥಾನಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟ, ದಾವಣಗೆರೆ ಜಿಲ್ಲೆಯಲ್ಲಿ ಎರಡು ಶಿಕ್ಷಕರ ಕ್ಷೇತ್ರ, ಒಂದು ಪದವೀಧರ ಕ್ಷೇತ್ರ**

ದಾವಣಗೆರೆ, ಮೇ 2 - ಚುನಾವಣಾ ಆಯೋಗವು ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಿದ್ದು, ದಾವಣಗೆರೆ ಜಿಲ್ಲೆ ಎರಡು ಶಿಕ್ಷಕರ ಕ್ಷೇತ್ರ ಹಾಗೂ ಒಂದು ಪದವೀಧರರ ಕ್ಷೇತ್ರದ ವ್ಯಾಪ್ತಿಯನ್ನು ಹೊಂದಿದ್ದು ಜೂನ್ 3 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಜೂನ್ 21 ಕ್ಕೆ ವಿಧಾನ ಪರಿಷತ್ತಿನ 3 ಪದವೀಧರರ ಹಾಗೂ 3 ಶಿಕ್ಷಕರ ಕ್ಷೇತ್ರದ ಸ್ಥಾನಗಳ ಅವಧಿ ಮುಕ್ತಾಯವಾಗುವುದರಿಂದ ದ್ವೈವಾರ್ಷಿಕ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಲಾಗಿದೆ. ಮೇ 9 ರಂದು ಅಧಿಸೂಚನೆ ಪ್ರಕಟವಾಗಲಿದ್ದು, ಮೇ 16 ರವರೆಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಮೇ 17 ರಂದು ನಾಮಪತ್ರಗಳ ಪರಿಶೀಲನೆ, ಮೇ 20 ರಂದು ನಾಮಪತ್ರಗಳ ವಾಪಸ್ ಪಡೆಯಲು ಕೊನೆಯ ದಿನವಾಗಿರುತ್ತದೆ. ಜೂನ್ 3 ರಂದು ಬೆಳಗ್ಗೆ 8 ರಿಂದ ಸಂಜೆ 4 ರವರೆಗೆ ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 6 ರಂದು ನಡೆಯಲಿದ್ದು, ಜೂನ್ 12 ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ವಿಧಾನ ಪರಿಷತ್ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿರುವುದರಿಂದ ನೀತಿಸಂಹಿತೆ ಜಾರಿಯಲ್ಲಿರುತ್ತದೆ.

**ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 3 ವಿಧಾನ ಪರಿಷತ್ ಸದಸ್ಯರ ಆಯ್ಕೆಗೆ ಚುನಾವಣೆ :** ಕರ್ನಾಟಕ ನೈಋತ್ಯ ಪದವೀಧರರ ಕ್ಷೇತ್ರಕ್ಕೆ ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಸೇರಲಿವೆ.

**ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿ :** ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳು ಸೇರಲಿವೆ.

**ಕರ್ನಾಟಕ ನೈಋತ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿ :** ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳು ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲ್ಲೂಕುಗಳು ಈ ಕ್ಷೇತ್ರದಲ್ಲಿ ಬರಲಿವೆ.

# ಹರಪನಹಳ್ಳಿ ತಾ.ನಲ್ಲಿ ಇಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಪ್ರಚಾರ

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಿಚ್ಚವ್ವನಹಳ್ಳಿ ಗ್ರಾಮದಿಂದ ಬೆಳಿಗ್ಗೆ 8.30 ಗಂಟೆಯಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು ಕಡಬಗೆರೆ, ಸಾಸ್ವಿಹಳ್ಳಿ, ಮತ್ತಿಹಳ್ಳಿ, ಮೈದೂರು, ನಂದಿಬೇವೂರು, ಚಿಗಟೇರಿ, ಬಳಿಗನೂರು, ಬೆಣ್ಣೆಹಳ್ಳಿ ಗ್ರಾಮಗಳ ನಂತರ ಹರಪನಹಳ್ಳಿ ಪಟ್ಟಣದಲ್ಲಿ ಸಂಜೆ 7 ರವರೆಗೆ ಮತಯಾಚನೆ ಮಾಡುವರು.



ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಶಾಸಕರಾದ ಶ್ರೀಮತಿ ಲತಾ ಮಲ್ಲಿಕಾರ್ಜುನ್, ಅರಸೀಕೆರೆ ಕೊಟ್ರೇಶ್ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಎಂ.ವಿ. ಅಂಜಿನಪ್ಪ ಮತ್ತು ಕುಬೇರಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಆಟೋ ರ್‍ಯಾಲಿ

ದಾವಣಗೆರೆ, ಮೇ 2 - ಜಿಲ್ಲಾ ಆಟೋ ಚಾಲಕರ ಹಾಗೂ ಮಾಲೀಕರ ಸಂಘಗಳ ಒಕ್ಕೂಟದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಿ ನಾಳೆ ಶುಕ್ರವಾರ ಬೆಳಿಗ್ಗೆ 11.30ಕ್ಕೆ ನಗರದ ಹೈಸ್ಕೂಲ್ ಮೈದಾನದಿಂದ ಬೃಹತ್ ಆಟೋ ರ್‍ಯಾಲಿ ಹಮ್ಮಿಕ್ಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಮಂಜುನಾಥ ಡಿ. ಜಾಲಿಹಾಳ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಹೇಳಿದರು.

ಮಲ್ಲಿಕಾರ್ಜುನ್ ಅವರು ಆಟೋ ಕಾಲೊನಿ ಸ್ಥಾಪನೆ, ಉತ್ತಮ ರಸ್ತೆಗಳ ನಿರ್ಮಾಣಕ್ಕೆ ಕಾರಣವಾಗಿದ್ದಾರೆ. ಅಲ್ಲದೇ, ಆಟೋ ಚಾಲಕರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದಾರೆ ಎಂದವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಟಿ. ರವಿಕುಮಾರ್, ಕೊಟ್ರೇಶ್, ಎಂ. ರಮೇಶ್, ಅಸ್ಗರ್, ರಾಘವೇಂದ್ರ, ಅರುಣ್ ಕುಮಾರ್, ಅಣ್ಣಪ್ಪಸ್ವಾಮಿ, ಎ. ಆರ್. ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

## ಎಸ್.ಎಸ್. ಮಲ್ಲಿಕಾರ್ಜುನ್ ಸೇವಾ ಸಂಸ್ಥೆಯಿಂದ ಡಾ. ಪ್ರಭಾ ಪರ ಪಾದಯಾತ್ರೆ

ದಾವಣಗೆರೆ, ಮೆ 2 - ಕರ್ನಾಟಕ ರಾಜ್ಯ ಎಸ್.ಎಸ್. ಮಲ್ಲಿಕಾರ್ಜುನ್ ಸೇವಾ ಸಂಸ್ಥೆ ವತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವಿಗಾಗಿ ಪಾದಯಾತ್ರೆ ಮೂಲಕ ಮತಯಾಚಿಸಲಾಯಿತು.

ನಗರ ದೇವತೆ ಶ್ರೀ ದುರ್ಗಾಂಭಿಕಾ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ದರ್ಗಕ್ಕೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿಲಾಯಿತು. ರಾಜ್ಯ ಎಸ್.ಎಸ್. ಮಲ್ಲಿಕಾರ್ಜುನ್ ಸೇವಾ ಸಂಸ್ಥೆಯ ಅಧ್ಯಕ್ಷ ಬುತ್ತಿ ಹುಸೇನ್ ಪಾದಯಾತ್ರೆಯ ನೇತೃತ್ವ ವಹಿಸಿದ್ದರು.

ಈ ಪಾದಯಾತ್ರೆಗೆ ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷ ಅಥಣಿ ವೀರಣ್ಣ ಮತ್ತು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಎಂ.ಡಿ. ಸಮೀವುಲ್ಲಾ, ಡೋಲಿ ಚಂದ್ರು, ಬಾಟ್ಲಿ ಶೇಕ್ ಅಹಮ್ಮದ್, ಈರುಳ್ಳಿ ನೂರುಲ್ಲಾ, ಧನುಷ್, ಜೆ.ಆರ್. ಕುಮಾರ್ ಇನ್ನೂ ಮುಂತಾದವರು ಪಾಲ್ಗೊಂಡಿದ್ದರು.





## ಬೂದಿಹಾಳ್‌ನಲ್ಲಿ ಬಿಜೆಪಿ ಅಭ್ಯರ್ಥಿಗಳ ಮತಯಾಚನೆ

ದಾವಣಗೆರೆ, ಮೇ 2 - ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೂದಿಹಾಳ್ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಪತಿ ಸಂಸದ ಜಿ.ಎಂ. ಸಿದ್ದೇಶ್ವರ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಗಾಂಧಿನಗರ ಹಾಲೇಶ್, ಅಂಜಿನಪ್ಪ, ಗಿರೀಶ್, ಬೂದಿಹಾಳ್ ರಾಜು, ನಾಗರಾಜ್ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು.

## ಹರಿಹರದಲ್ಲಿ ನಾಳಿನ ಕಾಂಗ್ರೆಸ್ ಪಕ್ಷದ ಕುರುಬ ಸಮಾಜದ ಬೆಂಬಲಿತ ಸಭೆಗೆ ಮುಖ್ಯಮಂತ್ರಿ

ಹರಿಹರ, ಮೇ 2- ಮೇ 7 ರಂದು ನಡೆಯುವ ದಾವ ಣಗೆರೆ ಲೋಕಸಭಾ ಚುನಾವಣೆ ಅಂಗವಾಗಿ ಕಾಂಗ್ರೆಸ್ ಪಕ್ಷದ ಕುರುಬ ಸಮಾಜದ ಬೆಂಬಲಿತ ಸಭೆಯನ್ನು ನಾಳೆ ದಿನಾಂಕ 4ರ ಶನಿವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಕುರುಬ ಸಮಾಜದ ಮುಖಂಡ, ವಕೀಲ ಲೋಕಿಕೆರೆ ಸಿದ್ದಪ್ಪ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡಿದ್ದು ದಿನಾಂಕ 4 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಚುನಾವಣೆ ಪ್ರಚಾರಕ್ಕೆ ಆಗಮಿಸಲಿದ್ದು, ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ದಾವಣಗೆರೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಜಿಲ್ಲೆಯ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುವ ಕುರುಬ ಸಮಾಜದವರ ಸಭೆಯಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ.

ಸಭೆಯಲ್ಲಿ ಸಮಾಜದ ಮುಖಂಡರಾದ ಹೆಚ್. ಎಂ.ರೇವಣ್ಣ, ಮಾಜಿ ಶಾಸಕ ಎಸ್.ರಾಮಪ್ಪ, ಶಿವಕುಮಾರ್ ಒಡೆಯರ್ ಸೇರಿದಂತೆ ಹಲವಾರು ಕುರುಬ ಸಮಾಜದ ಮುಖಂಡರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಕುರುಬ ಸಮಾಜದ ಮುಖಂಡರಾದ ಮಾಜಿ ಶಾಸಕ ಎಸ್.ರಾಮಪ್ಪ, ಶಿವಕುಮಾರ್ ಒಡೆಯರ್, ಬಿ.ರೇವಣಸಿದ್ದಪ್ಪ, ಕೆ. ಜಡಿಯಪ್ಪ, ಸುರೇಶ್ ಹಾದಿಮನಿ, ಸಿ.ಎನ್. ಹುಲಗೇಶ್, ಜೆ.ಸಿ.ನಿಂಗಪ್ಪ, ಡಿ.ದಿಳ್ಳೆಪ್ಪ, ಗೋಣ್ಯಪ್ಪ, ನಾಗರಾಜ್ ಜಂಬನಹಳ್ಳಿ, ಶಿವಣ್ಣ, ಗಿರೀಶ್ ಒಡೆಯರ್, ಎಸ್. ಎನ್.ಆನಂದಪ್ಪ, ಚಂದ್ರಶೇಖರ್ ಒಡೆಯರ್ ಹಾಗೂ ಇತರರು ಹಾಜರಿದ್ದರು.

## ರಾಣೇಬೆನ್ನೂರಿಗೆ ಇಂದು ಸಿಎಂ ಸಿದ್ದರಾಮಯ್ಯ

ಹಾವೇರಿ-ಗದಗ ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ಆನಂದ ಗಡ್ಡದೇವರಮಠ ಅವರ ಪರವಾಗಿ ಮತ ಯಾಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಸಂಜೆ ರಾಣೇಬೆನ್ನೂರಿಗೆ ಆಗಮಿಸಿ ಉರ್ದು ಹೈಸ್ಕೂಲ್ ಮೈದಾನದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗವಹಿಸುವರು.

## ಬಿಜೆಪಿ ಅಭ್ಯರ್ಥಿ ಪರ ನಗರದಲ್ಲಿ ಇಂದು ಯದುವೀರ್ ಒಡೆಯರ್ ರೋಡ್ ಶೋ



ದಾವಣಗೆರೆ, ಮೇ 2 - ಬಿಜೆಪಿ ಮುಖಂಡ, ಮೈಸೂರಿನ ರಾಜವಂಶಸ್ಥರಾದ ಯದುವೀರ್ ಒಡೆಯರ್ ಅವರು ನಾಳೆ ಶುಕ್ರವಾರ ನಗರದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಬೃಹತ್ ರೋಡ್ ಶೋ ನಡೆಸಲಿದ್ದಾರೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 9 ಗಂಟೆಗೆ ಭಗತ್ ಸಿಂಗ್ ನಗರದ ಚೌಡಮ್ಮ ದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ರೋಡ್ ಶೋ ಆರಂಭಿಸಲಾಗುವುದು.

ಭಗತ್ ಸಿಂಗ್ ನಗರದ ಆಟೋ ನಿಲ್ದಾಣ, ನಿಟುವಳ್ಳಿ ರಸ್ತೆ, ಕೆ.ಟಿ.ಜೆ. ನಗರದ 17ನೇ ಕ್ರಾಸ್, ಕೆಟಿಜೆ ನಗರದ 2ನೇ ಮೇನ್ ಮೂಲಕ ಶಿವಪ್ಪಯ್ಯ ಸರ್ಕಲ್‌ನಲ್ಲಿ ರೋಡ್ ಶೋ ಮುಕ್ತಾಯವಾಗಲಿದೆ.

ಸಂಜೆ 4 ಗಂಟೆಗೆ ಗಾಂಧಿನಗರದ ಹುಲಿಗೆಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ರೋಡ್ ಶೋ ಆರಂಭಿಸಲಾಗುವುದು. ಪೊಲೀಸ್ ಠಾಣೆ ರಸ್ತೆ, ವಿಠ್ಠಲ ಮಂದಿರ ರಸ್ತೆ, ಚೌಕಿಪೇಟೆ, ಹಾಸಭಾವಿ ಸರ್ಕಲ್, ಚಾಮರಾಜಪೇಟೆ, ಮಂಡಿಪೇಟೆ ಮುಖಾಂತರ ರೋಡ್ ಶೋ ನಡೆದು ಗಡಿಯಾರ ಕಂಬದ ಬಳಿ ಮುಕ್ತಾಯಗೊಳ್ಳಲಿದೆ ಎಂದವರು ಹೇಳಿದರು.

ಈ ರೋಡ್ ಶೋದಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಸೇರಿದಂತೆ ಹಲವು ಮುಖಂಡರು ಭಾಗಿಯಾಗಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಅನಿಲ್ ನಾಯಕ್, ಧನಂಜಯ್ ಕಡ್ಲೇಬಾಳು, ಹೆಚ್.ಎನ್. ಶಿವಕುಮಾರ್, ಆರ್.ಲಕ್ಷ್ಮಣ್, ಟಿಂಕರ್ ಮಂಜಣ್ಣ, ದಂಡಪಾಣಿ, ಕೊಳೇನಹಳ್ಳಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

## ಕುಂದುವಾಡ ಕೆರೆ : ಸಿದ್ದೇಶ್ವರ ವಿರುದ್ಧದ ಆರೋಪ ಸತ್ಯಕ್ಕೆ ದೂರ - ಜಯಮ್ಮ

ದಾವಣಗೆರೆ, ಮೇ 2 - ಕುಂದುವಾಡ ಕೆರೆ ಅಭಿವೃದ್ಧಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ 16 ಕೋಟಿ ರೂ. ಲೂಟಿ ಮಾಡಿದ್ದಾರೆ ಎಂದು ಆರೋಪಿಸಿರುವುದು ಸತ್ಯಕ್ಕೆ ದೂರವಾಗಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾದ ಹೆಚ್.ಸಿ. ಜಯಮ್ಮ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಂಡುವಾಡ ಕೆರೆ ಅಭಿವೃದ್ಧಿ ಕಾರ್ಯದಲ್ಲಿ ಲೂಟಿ ಹೊಡೆದಿರುವುದು ಶಾಮನೂರು ಕುಟುಂಬದವರೇ ಹೊರತು ಸಂಸದ ಜಿ.ಎಂ. ಸಿದ್ದೇಶ್ವರ ಅಲ್ಲ ಎಂದಿದ್ದಾರೆ.

ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ ಬಾಯಿ ಮಾಲತೇಶ್ ಅವರು ಸಿದ್ದೇಶ್ವರ ವಿರುದ್ಧ ಮಾಡಿದ ಆರೋಪ ತಳ್ಳಿ ಹಾಕಿರುವ ಜಯಮ್ಮ, ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮೊದಲ ಬಾರಿ ಸಚಿವರಾಗಿದ್ದಾಗ ಕುಂದುವಾಡ ಕೆರೆ ಅಭಿವೃದ್ಧಿಗೆ 3.5 ಕೋಟಿ ರೂ. ಅನುದಾನ ಬಳಸಿದ್ದಾರೆ.

ಆದರೆ, ಆಗ ಕೂಲಿಗಾಗಿ ಕಾಳು ಯೋಜನೆಯಡಿ ರೈತರೇ ಸ್ವಯಂ ಪ್ರೇರಿತವಾಗಿ ಹೂಳು ತೆಗೆದುಕೊಂಡು ಹೋಗಿದ್ದಾರೆ. ಕೆರೆ ಅಭಿವೃದ್ಧಿಗೆ ನಯಾ ಪೈಸೆ ಬಳಸಿಲ್ಲ ಎಂದು ಪ್ರತ್ಯಾರೋಪ ಮಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸ್ಮಾರ್ಟ್ ಸಿಟಿ ಯೋಜನೆಯಡಿ 16 ಕೋಟಿ ರೂ. ಅನುದಾನ ತೆಗೆದು ಪಾರದರ್ಶಕವಾಗಿ ಟೆಂಡರ್ ಕರೆದು ಕುಂದುವಾಡ ಕೆರೆ ಅಭಿವೃದ್ಧಿ ಮಾಡಿದ್ದಾರೆ ಎಂದು ಹೇಳಿದರು.

ಅನಿತಾಬಾಯಿ ಪತಿ ಮಾಲತೇಶ ರಾವ್ ದೂಡಾ ಅಧ್ಯಕ್ಷರಾಗಿದ್ದಾಗ ಎಷ್ಟು ಬೇನಾಮಿ ಸೈಟು ಮಾಡಿದ್ದಾರೆ? ನಿಜಲಿಂಗಪ್ಪ ಬಡಾವಣೆ ಮೂಲೆ ನಿವೇಶನಗಳನ್ನು ಬಿಡಿ ನಿವೇಶನಗಳಾಗಿ ಪರಿವರ್ತಿಸಿ ಎಷ್ಟು ಸೈಟುಗಳನ್ನು ಕಾನೂನು ಬಾಹಿರವಾಗಿ ಮಾರಾಟ ಮಾಡಿದ್ದಾರೆ? ಎಂಬುದನ್ನು ಜನತೆಗೆ ತಿಳಿಸಲಿ ಎಂದು ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾದ ಭಾಗ್ಯ ಪಿಸಾಳೆ, ಪುಷ್ಪ ವಾಲಿ, ಶಶಿಕಲಾ, ಶ್ಯಾಮಲ, ಚೇತನಾ ಶಿವಕುಮಾರ್, ವೀಣಾ, ಜಿಲ್ಲಾ ಬಿಜೆಪಿ ವಕ್ತಾರ ಕೊಳೇನಹಳ್ಳಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

# ಸಮೂಹ ಆತಂಕ ಸೃಷ್ಟಿಸಲು 200 ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ

ನವದೆಹಲಿ, ಮೇ 2 - ಸಮೂಹ ಆತಂಕ ಸೃಷ್ಟಿಸುವ ಸಲುವಾಗಿ ದೆಹಲಿಯ 200ರಷ್ಟು ಶಾಲೆಗಳಿಗೆ ಬಾಂಬ್‌ನ ಹುಸಿ ಬೆದರಿಕೆಯ ಹಾಕಲಾಗಿತ್ತು ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ. ಬುಧವಾರ ಬೆಳಿಗ್ಗೆ 5.47ರಿಂದ ಮಧ್ಯಾಹ್ನ 2.13ರ ನಡುವೆ ವಿವಿಧ ಶಾಲೆಗಳಿಗೆ ಬೆದರಿಕೆಯ ಇಮೇಲ್ ಕಳಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ. ಜನರಲ್ಲಿ ಆತಂಕ ಸೃಷ್ಟಿಸುವ ಉದ್ದೇಶದಿಂದ ಇಮೇಲ್‌ಗಳನ್ನು ಕಳಿಸಲಾಗಿತ್ತು. ಬೆದರಿಕೆ ನಂತರ ಶಾಲೆಗಳನ್ನು ಪರಿಶೀಲಿಸಿದಾಗ ಹುಸಿ ಬೆದರಿಕೆ ಎಂಬುದು ಕಂಡು ಬಂದಿತ್ತು.

# ಸಿ. ಕೇಶವಮೂರ್ತಿ ಸೇವೆ ಮರೆಯುವಂತಿಲ್ಲ ಆರ್ಯವೈಶ್ಯ ಸಮಾಜದ ಸಭೆಯಲ್ಲಿ ಸಚಿವ ಎಸ್ಸೆಸ್ಸೆಂ



ದಾವಣಗೆರೆ, ಮೇ 2- ಬಡವರ, ನಿರ್ಗತಿಕರ ಹಾಗೂ ದೀನ ದಲಿತರ ಏಳಿಗೆಗಾಗಿ ಆಶಾಕಿರಣವಾಗಿ ಸಮಾಜಸೇವೆ ಮಾಡಿರುವಂತಹ ದಿ. ಸಿ. ಕೇಶವಮೂರ್ತಿ ಅವರ ಸೇವೆ ಅಪಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ನಗರದ ಸದ್ಯೋಜಾತ ಮಠದಲ್ಲಿ ಆರ್ಯವೈಶ್ಯ ಸಮಾಜದಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಾಜಿ ಸಚಿವೆ ದಿ. ಶ್ರೀಮತಿ ನಾಗಮ್ಮ ಕೇಶವಮೂರ್ತಿ ಹಾಗೂ ಸಿ.ಕೇಶವಮೂರ್ತಿ ಅವರು ದಾವಣಗೆರೆ ಜಿಲ್ಲೆಗೆ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ ಎಂದ ಸಚಿವರು ಜಿಲ್ಲೆಯಲ್ಲಿ ಉತ್ತಮ ಪ್ರಾಜೆಕ್ಟ್ ತಂದು ಮತ್ತಷ್ಟು ಅಭಿವೃದ್ಧಿ ಮಾಡುವ ಕನಸು ಕಂಡಿದ್ದೇವೆ. ಕಾಂಗ್ರೆಸ್ ಪಕ್ಷದ ಜತೆ ಆರ್ಯವೈಶ್ಯ ಸಮಾಜ ಬಾಂಧವರು ಒಗ್ಗಟ್ಟಿನಿಂದ ಕೈ ಹಿಡಿಯಬೇಕು.


ನನಗಿಂತ ಹೆಚ್ಚಿನ ರೀತಿಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನಿಮ್ಮ ಒಡನಾಡಿಯಾಗಿದ್ದಾರೆ. ದಾವಣಗೆರೆ ಜಿಲ್ಲೆಗೆ ತ್ರಿಬಲ್ ಇಂಜಿನ ಸರ್ಕಾರದ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ.

ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ ಅವರನ್ನು ಮನೆ ಮಗಳಂತೆ ಆಶೀರ್ವದಿಸಿ ಲೋಕಸಭೆಗೆ ಕಳುಹಿಸಿ ಕೊಡಬೇಕು ಎಂದು ಮತಯಾಚನೆ ಮಾಡಿದರು.

ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಸಮರ್ಥ ಮಲ್ಲಿಕಾರ್ಜುನ, ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷರಾದ ಆರ್.ಎಲ್. ಪ್ರಭಾಕರ, ಆರ್ಯವೈಶ್ಯ ಮುಖಂಡರುಗಳಾದ ಆರ್.ಜಿ ಶ್ರೀನಿವಾಸ ಮೂರ್ತಿ, ಕಾಸಲ್ ಎಸ್. ಸತೀಶ್, ಬಿ.ಟಿ ಅಶ್ವಥ್ ರಾಜ್, ಮಾಕಂ ನಾಗರಾಜ ಗುಪ್ತ, ಅನಂತರಾಮಶೆಟ್ಟಿ, ಎ.ವೈ. ಸತ್ಯನಾರಾಯಣ, ಕಾಸಲ್ ಮಂಜುನಾಥ್, ಬಿ. ಟಿ.ಸುಪುತ್ರ, ವೈ.ಬಿ.ಸತೀಶ್, ಎಸ್.ಸುನಿಲ್, ಬಿ.ಎಸ್.ಶಿವಾನಂದ, ಬಿ.ಎಸ್.ರಾಘವೇಂದ್ರ ಶೆಟ್ಟಿ, ಶ್ರೀಮತಿ ಉಮಾ, ಶ್ರೀಮತಿ ರಾಧಾ ಗೋಪಾಲಕೃಷ್ಣ, ಇತರರಿದ್ದರು.

## ನಗರದಲ್ಲಿ ಇಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪ್ರಚಾರ

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಇಂದು ವಿವಿಧ ಕಡೆಗಳಲ್ಲಿ ರ್‍ಯಾಲಿ ಮತ್ತು ರೋಡ್ ಷೋ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.



ಮಧ್ಯಾಹ್ನ 11.30 ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿ ಆಟೋ ಚಾಲಕರ ರ್‍ಯಾಲಿಯಲ್ಲಿ ಪಾಲ್ಗೊಳ್ಳುವರು ಹಾಗೂ ವಾರ್ಡ್ ನಂ. 29, 32, 35, 36, 33, 34 ರ ವ್ಯಾಪ್ತಿಯಲ್ಲಿ ರೋಡ್ ಷೋ ನಡೆಸುವರು.


ಬೆಳ್ಳಿಹಬ್ಬ ಮಹೋತ್ಸವ

25ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಇಂದು ತಮ್ಮ 25ನೇ ವರ್ಷದ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿರುವ

**ಶ್ರೀಮತಿ ಹೇಮಲತಾ ಅರೇಮಲ್ ಮತ್ತು ಶ್ರೀ ಈರಪ್ಪ ಎಸ್. ಅರೇಮಲ್**

ಇವರಿಗೆ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು.

ಶುಭಕೋರುವವರು : ದಿ|| ಶ್ರೀಮತಿ ಮಲ್ಲಮ್ಮ ಶ್ರೀ ಸಂಗಪ್ಪ ಅರೇಮಲ್ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು.

**ಅನುಷಾ ಗನ್ನಿ ಮರ್ಚೆಂಟ್ಸ್**, ದಾವಣಗೆರೆ




ಲಲಿತಾ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ & ಲಲಿತಾ ಪದವಿ ಪೂರ್ವ ಕಾಲೇಜು

ಲೋಕಿಕೆರೆ ಮೇನ್ ರೋಡ್, ದಾವಣಗೆರೆ

ADMISSIONS OPEN FOR KG TO PUC

DEPT. OF SCIENCE | DEPT. OF COMMERCE



97.50% SATYAVATI S · 97.00% M. SWALIHA · 96.50% KAVANA K G · 96.50% MANJUNATH M C · 96.16% MALLIKARJUNA G H · 96.33% K P CHANDANA · 95.67% GOUSIYA R · 94.67% RAKSHITHA V R

LIPS ಪ್ರವೇಶಾತಿ ಪ್ರಾರಂಭ 2024-25

FACILITY AVAILABLE: HOSTEL, TRANSPORT & LONG TERM NEET COACHING CONTACT: 9980629965 • 7022004042


## ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರರಿಗೆ ಕಾಡುಗೊಲ್ಲರ ಸಂಘದ ಬೆಂಬಲ



ದಾವಣಗೆರೆ, ಮೇ.02- ರಾಜ್ಯ ಹಾಗೂ ಜಿಲ್ಲಾ ಕಾಡುಗೊಲ್ಲರ ಸಂಘದ ವತಿಯಿಂದ ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ಸೂಚಿಸಲು ಸಭೆ ನಡೆಸಲಾಯಿತು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ, ರಾಜ್ಯ ಗೌರವಾಧ್ಯಕ್ಷ ಮೀಸೆ ಮಹಾಲಿಂಗಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಸಿ.ಡಿ. ಪ್ರಭುದೇವ್, ವಿ.ಪ ಮುಖ್ಯ ಸಚೇತಕ ರವಿ ಕುಮಾರ್, ಬಿಜೆಪಿ ಯುವ ಮುಖಂಡ ಜಿ.ಎಸ್ ಅನಿತ್ ಕುಮಾರ್, ಬಿಜೆಪಿಯ ಮುಖಂಡರಾದ ತಿಪಟೂರು ಶಂಕ್ರಪ್ಪ, ಶಶಿಧರ್, ಜಿಲ್ಲಾಧ್ಯಕ್ಷ ಸುಂಕಪ್ಪ, ಚನ್ನಗಿರಿ ತಾಲ್ಲೂಕು ಅಧ್ಯಕ್ಷ ರಂಗನಾಥ್, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಕೆಂಪಣ್ಣ, ಚಿತ್ರದುರ್ಗ ಜಿಲ್ಲಾ ಬಿಜೆಪಿ ಅಧ್ಯಕ್ಷ ಮುರುಳಿ ಹಾಗೂ ಕಾಡುಗೊಲ್ಲ ಸಮಾಜದ ಮುಖಂಡರಿದ್ದರು.

## ಗುಡ್ಡದಾನ್ವೇರಿಯಲ್ಲಿ ಗುಡ್ಡಾಪುರ ದಾನಮ್ಮ ಪ್ರವಚನ





ರಾಣೇಬೆನ್ನೂರು ತಾಲ್ಲೂಕಿನ ಗುಡ್ಡದಾನ್ವೇರಿ ವಿರಕ್ತ ಮಠದಲ್ಲಿ ಇಂದಿನಿಂದ 11ರವರೆಗೆ ಮುಂಡರಗಿ ಅನ್ನದಾನೇಶ್ವರ ಶ್ರೀಗಳ ಸಾನಿಧ್ಯ ದಲ್ಲಿ ಶ್ರೀ ಮಠದ ಪೀಠಾಧಿಪತಿ ಶ್ರೀ ಶಿವಯೋಗೀ ಶ್ವರ ಸ್ವಾಮಿಗಳ ನೇತೃತ್ವದಲ್ಲಿ ಶರಣೆ ಗುಡ್ಡಾಪುರ ದಾನಮ್ಮದೇವಿ ಪುರಾಣ ಪ್ರವಚನ, ಜಂಗಮ ಜ್ಯೋತಿ ಶಿವಯೋಗಿಗಳ 71ನೇ ಜಾತ್ರೋತ್ಸವ ಹಾಗೂ ಶ್ರೀಗಳ 61ನೇ ಹುಟ್ಟುಹಬ್ಬದ ಕಾರ್ಯ ಕ್ರಮಗಳು ನಡೆಯಲಿವೆ.

ನೆಗಳೂರ ಹಿರೇಮಠದ ಶ್ರೀ ಗುರುಶಾಂತ ಶಿವಾ ಚಾರ್ಯರು, ಹಿರೇಮಠ ವೆಂಕಟಾಪುರದ ಶ್ರೀ ಗುರುಸಿದ್ದದೇವರು, ಹತ್ತಿ ಮತ್ತೂರು ಕರ್ಜಗಿ ಮಠದ ಶ್ರೀ ನಿಜಗುಣ ಶಿವಯೋಗಿಗಳು, ಗೋಲಗೆರೆ ವಿರಕ್ತ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಆಗಮಿಸುವರು.ಹಕ್ಕಂಡಿ ಕುದೇಂದ್ರ ಶಾಸ್ತ್ರಿಗಳು ಪ್ರತಿದಿನ ಸಂಜೆ ದಾನಮ್ಮದೇವಿ ಪ್ರವಚನ ನಡೆಸುವರು.

## ದುಗ್ಗಮ್ಮ ದೇವಸ್ಥಾನದ ಬಳಿ ವಾರದ ಸಂತೆ ನಡೆಸಲು ಒತ್ತಾಯ

ದಾವಣಗೆರೆ, ಮೇ 2- ನಗರದ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಬಳಿ 5 ವಾರ ಸಂತೆ ನಡೆಸುವಂತೆ ಹಿರಿಯ ಮುಖಂಡ ಜೆ. ಸೋಮನಾಥ್ ಮತ್ತು ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಅವರುಗಳು ಮಹಾ ನಗರ ಪಾಲಿಕೆ ಆಯುಕ್ತರು ಮತ್ತು ದೇವಸ್ಥಾನ ಸಮಿತಿ ಧರ್ಮ ದರ್ಶಿಗಳಲ್ಲಿ ಮನವಿ ಮಾಡಿದ್ದಾರೆ.

ಮಳೆ ಬಾರದೆ, ಬರಗಾಲ ದಿಂದಾಗಿ ನೀರಿನ ಹಾಹಾಕಾರದ ಜೊತೆಗೆ ಬಿಸಿಲಿನ ತಾಪವೂ ಹೆಚ್ಚಾಗಿದ್ದು, ಬೇರೆಡೆ ಮಳೆ ಬರುತ್ತಿದೆ ಆದರೆ ನಗರದಲ್ಲಿ ಮಾತ್ರ ಮಳೆ ಆಗುತ್ತಿಲ್ಲ ಹಾಗಾಗಿ ಮನುಷ್ಯರ ಜೊತೆಗೆ ಪ್ರಾಣಿ ಪಕ್ಷಿಗಳೂ ಕಂಗಾಲಾಗಿವೆ. ಕೂಡಲೇ ದೇವಸ್ಥಾನದ ಬಳಿ ಸಂತೆ ನಡೆಸುವ ಮೂಲಕ ದೇವಿಯ ಕೃಪೆಗೆ ಪಾತ್ರರಾಗಬೇಕಿದೆ ಎಂದು ಸೋಮನಾಥ್ ಮತ್ತು ನಾಗರಾಜ್ ತಿಳಿಸಿದ್ದಾರೆ.

## ರೇವಣ್ಣ ಅರ್ಜಿ

(1ನೇ ಪುಟದಿಂದ) ಅರ್ಜಿ ದಾಖಲಿಸಿ ದ್ದಾರೆ. ಈ ಪ್ರಕರಣದಲ್ಲಿ ರೇವಣ್ಣ ಪುತ್ರ ಪ್ರಜ್ವಲ್ ಸಹ ಆರೋಪಿ. ಜಾಮೀನಿನ ಬಗ್ಗೆ ನ್ಯಾಯಾಲಯ ಶುಕ್ರವಾರ ವಿಚಾರಣೆ ನಡೆಸಲಿದೆ.

# ಸರ್ವಜನಾಂಗದ ಶಾಂತಿಯ ತೋಟ ಭಾರತವನ್ನಾಗಿಸಲು ಕಾಂಗ್ರೆಸ್‌ಗೆ ಮತ ನೀಡಿ



### ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಪರ ಎಸ್ಸೆಸ್ ಭರ್ಜರಿ ರೋಡ್ ಷೋ

ದಾವಣಗೆರೆ, ಮೇ 2 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 18, 7, 8 ಮತ್ತು 10ನೇ ವಾರ್ಡ್‌ಗಳಲ್ಲಿ ವ್ಯಾಪ್ತಿಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಪರವಾಗಿ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಭರ್ಜರಿ ರೋಡ್ ಷೋ ನಡೆಸಿದರು.

ನಂತರ ಎಸ್ಸೆಸ್ ಮಾತನಾಡಿ, ಭಾರತ ದೇಶ ಸರ್ವಜನಾಂಗದ ಶಾಂತಿಯ ತೋಟ ಇಂತಹ ತೋಟವನ್ನು ಹಾಳು ಮಾಡುವ ಜನರನ್ನು ದೂರವಿಡಬೇಕಾದರೆ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಬೇಕಿದೆ ಎಂದು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರವು ಸಹ ಭಾರತ ದೇಶ ಇದ್ದಂತೆ ಇಲ್ಲಿ ಎಲ್ಲಾ ಜಾತಿ ಧರ್ಮದವರು ಇದ್ದಾರೆ. ಈ ಭಾಗದಲ್ಲಿ ನಮಗೆ ಯಾವ ರೀತಿ ಸದಾ ಬೆಂಬಲ ನೀಡುತ್ತಾ ಉತ್ತಮ ವಾತಾವರಣಕ್ಕೆ ಸಹಕಾರಿಯಾಗಿದ್ದಿರಿ. ಅದೇ ರೀತಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.122 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರೆಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸುವುದು, ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮೇಯರ್ ವಿನಾಯಕ ಪೈಲ್ವಾನ್, ಬ್ಲಾಕ್ ಅಧ್ಯಕ್ಷ ಅಯೂಬ್ ಪೈಲ್ವಾನ್, ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ, ಮಹಾನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಮಾಜಿ ಸದಸ್ಯ ಪಿ.ಎನ್.ಚಂದ್ರಶೇಖರ್, ಮಾಜಿ ಮೇಯರ್ ಅನಿತಾಬಾಯಿ, ಮಾಜಿ ಸದಸ್ಯ ಪಿ.ಎನ್. ಚಂದ್ರಶೇಖರ್, ಡೂಡಾ ಮಾಜಿ ಅಧ್ಯಕ್ಷ ಮಾಲತೇಶ್ ರಾವ್, ನಗರಸಭೆ ಮಾಜಿ ಅಧ್ಯಕ್ಷ ಬಿ. ವೀರಣ್ಣ, ಮಾಜಿ ಉಪಾಧ್ಯಕ್ಷ ಎಸ್.ಎನ್.ಚಂದ್ರಪ್ಪ, ಮಾಜಿ ಸದಸ್ಯ ಬಾಬುರಾವ್ ಸಾಳಂಕಿ, ವಾರ್ಡ್ ಅಧ್ಯಕ್ಷರುಗಳಾದ ಪರಮೇಶ್, ಶಂಭು, ವಿಶ್ವನಾಥ, ಡಿಶ್ ಮಂಜುನಾಥ್, ಸತೀಶ್, ಕ್ಯಾಪ್ಟನ್ ನಾಗರಾಜ್, ಮಾಜಿ ಸಂಸದ ಕೆ.ಸಿ.ಕೊಂಡಯ್ಯ, ಉದ್ಯಮಿಗಳಾದ ಅಥಣಿ ವೀರಣ್ಣ, ಎಸ್.ಕೆ.ವೀರಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಿ, ನನಗೂ ಅವಕಾಶ ಕೊಡಿ

### ಹರಿಹರದಲ್ಲಿ ಬೃಹತ್ ರೋಡ್ ಶೋ ನಡೆಸಿದ ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯ್ ಕುಮಾರ್ ಮನವಿ



ಹರಿಹರ, ಮೇ 2- ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಿ, ನಿಮ್ಮ ಮನೆ ಮಗನನ್ನು ಲೋಕಸಭೆಗೆ ಕಳುಹಿಸಿಕೊಡಿ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮನವಿ ಮಾಡಿದರು.

ಹರಿಹರ ಪಟ್ಟಣದಲ್ಲಿ ರೋಡ್ ಶೋ ನಡೆಸಿ ಗಾಂಧಿ ವೃತ್ತದಲ್ಲಿ ಜನರನ್ನುದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ ನಡೆಯುತ್ತಿರುವ ಚುನಾವಣೆ ಒಂದೆಡೆಯಾದರೆ ದಾವಣಗೆರೆ ಕ್ಷೇತ್ರದ ಚುನಾವಣೆ ಕಣವೇ ಬೇರೆ. ಇಲ್ಲಿ ಜನಸಾಮಾನ್ಯರಿಗೆ ಅವಕಾಶ ಗಳಿಲ್ಲ, ಸ್ವಾತಂತ್ರ್ಯವಿಲ್ಲ. ಪಾಳೇಗಾರಿಕೆ ಸಂಸ್ಕೃತಿ, ದೌರ್ಜನ್ಯ, ದಬ್ಬಾಳಿಕೆ ಜೊತೆಗೆ ಎಲ್ಲಾ ಅಧಿಕಾರದ ಸ್ಥಾನಗಳಲ್ಲಿ ನಾವೇ ಇರಬೇಕೆಂಬ ಸಂಕುಚಿತ ಭಾವನೆ ಇದೆ. ಸಾಮಾನ್ಯ ಜನರು ಕೇವಲ ಕೇವಲ ಮತ ಹಾಕಲು ಅಷ್ಟೇ ಇರುವುದು ಎಂಬ ಮನೋಭಾವನೆ ಹೊಂದಿರುವವರಿಗೆ ತಕ್ಕ ಪಾಠ ಕಲಿಸಿ. ನಾನು ಗೆಲ್ಲಲಿ, ಸೋಲಲಿ. ನಾನೆಲ್ಲೂ ಹೋಗಲ್ಲ. ನಿಮ್ಮ ಸೇವೆಗೆ ಸದಾ ಬದ್ಧನಿರುತ್ತೇನೆ ಎಂದರು.

ಕಾಂಗ್ರೆಸ್ ಹಾಗೂ ಬಿಜೆಪಿಗೆ ಅಧಿಕಾರ ಬೇಕಿರುವುದು ಜನಸೇವೆಗಲ್ಲ, ಸ್ವ ಪ್ರತಿಷ್ಠೆ, ಸ್ವ ಅಭಿವೃದ್ಧಿ, ಸ್ವ ಆಸ್ತಿಗಳ ಉಳಿಸಿಕೊಳ್ಳುವ ನೆಪ ಮಾತ್ರ ಕಾಣಿಸುತ್ತಿದೆ ಎಂದು ಕಿಡಿಕಾರಿದರು.

ನ್ಯೂಯಾರ್ಕ್‌ನಿಂದ ಬಂದಿದ್ದ ಇನ್ಸೈಟ್ ಮೆಂಟರ್ ಡಾ. ಶ್ರೀನಾಥ್ ಅರಕಲಗೋಡು, ಪುರಂದರ ಲೋಕಿಕೆರೆ, ವಿನಯ್ ಅವರ ಚಿಕ್ಕಪ್ಪ ರಮೇಶ್ ಚಿಕ್ಕಬೂದಾಳ್, ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಮಾಜಿ ಮೇಯರ್ ಕೆ. ವೆಂಕಟೇಶ್ ಮೂರ್ತಿ, ನಿವೃತ್ತ ಕೆಎಎಸ್ ಅಧಿಕಾರಿಗಳಾದ ಕೊತ್ತಂಬರಿ ಸಿದ್ದಪ್ಪ ಭಾನುವಳ್ಳಿ, ಕೆ. ರೇವಣಪ್ಪ ಕಮಲಪುರ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರಿನ ಡಾ. ಮಹಾದೇವಗೌಡ ಅವರ ತಂಡ ಮತ್ತು ಇತರರು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು.

## ಗೋಶಾಲೆಗೆ ಹುಲ್ಲು ದಾನಕ್ಕೆ ಕರೆ



ದಾವಣಗೆರೆ, ಮೇ 2- ಆವರಗೆರೆ ಬಳಿಯ ಶ್ರೀ ಭಗವಾನ್ ಮಹಾವೀರ್ ಗೋಶಾಲೆಯಲ್ಲಿ 600 ಕ್ಕೂ ಹೆಚ್ಚು ಹಸು ಮತ್ತು ಕರುಗಳನ್ನು ಸಾಕಲಾಗುತ್ತಿದ್ದು, ರೈತ ಬಾಂಧವರು ತಮ್ಮ ಕೈಲಾದಷ್ಟು ಮೇವು (ಹುಲ್ಲು) ಪೆಂಡಿಗಳನ್ನು ದಾನ ಮಾಡುವುದರ ಮೂಲಕ ಸಾರ್ಥಕ ಸೇವೆ ಸಲ್ಲಿಸುವಂತೆ ವಿನಂತಿಸಲಾಗಿದೆ.

ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘದಿಂದ ನಡೆಯುತ್ತಿರುವ ಈ ಗೋಶಾಲೆಗೆ ಈಗಾಗಲೇ ಅನೇಕ ಜನರು, ರೈತರು ಮೇವನ್ನು ದಾನ ಮಾಡುತ್ತಿದ್ದಾರೆ. ದಾನಿಗಳು ಗೋಶಾಲೆಗೆ ಹುಲ್ಲನ್ನು ನೀಡುವುದರೊಂದಿಗೆ ಹಸು ಮತ್ತು ಕರುಗಳ ರಕ್ಷಣೆಗೆ ಸಹಕರಿಸುವಂತೆ ಗೋಶಾಲೆಯ ಜಿತೇಂದ್ರ ಜೈನ್ (94485-16033), ದಿನೇಶ್ ಜೈನ್ (99803-39333) ಕೋರಿದ್ದಾರೆ.

## ಪ್ರಜ್ವಲ್ ವೀಸಾಗೆ ರಾಜಕೀಯ ಅನುಮತಿ ಪಡೆದಿರಲಿಲ್ಲ : ವಿದೇಶಾಂಗ ಸಚಿವಾಲಯ

ನವದೆಹಲಿ, ಮೇ 2 – ಪೆನ್‌ಡ್ರೈವ್ ಪ್ರಕರಣದಲ್ಲಿ ಸಿಲುಕಿರುವ ಸಂಸದ ಪ್ರಜ್ವಲ್ ರೇವಣ್ಣ ರಾಜತಾಂತ್ರಿಕ ವೀಸಾದ ಮೇಲೆ ಜರ್ಮನಿಗೆ ತೆರಳಿದ್ದು, ಇದಕ್ಕಾಗಿ ರಾಜಕೀಯ ಅನುಮತಿ ಪಡೆದಿರಲಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಪತ್ರಕರ್ತರೊಂದಿಗೆ ಮಾತನಾಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ನ್ಯಾಯಾಲಯದ ನಿರ್ದೇಶನದ ನಂತರವೇ ಪ್ರಜ್ವಲ್ ರಾಜತಾಂತ್ರಿಕ ವೀಸಾ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಾಧ್ಯ ಎಂದಿದ್ದಾರೆ.

ಸಂಸದರು ರಾಯಭಾರಿ ವೀಸಾ ಹೊಂದಿರುತ್ತಾರೆ. ಅವರು ವಿದೇಶಕ್ಕೆ ತೆರಳಲು ಯಾವುದೇ ವೀಸಾ ಟಿಪ್ಪಣಿಯ ಅಗತ್ಯವಿರುವುದಿಲ್ಲ ಎಂದವರು ಹೇಳಿದ್ದಾರೆ. ಪ್ರಜ್ವಲ್ ವೀಸಾ ರದ್ದುಗೊಳಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದರು.

## ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಕಾರ್ಯದರ್ಶಿಯಾಗಿ ನಾಯರಿ



ದಾವಣಗೆರೆ, ಮೇ 2- ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಅಖಿಲ ಭಾರತ ಕಾರ್ಯದರ್ಶಿಯಾಗಿ ನಗರದ ಕೆ. ರಾಘವೇಂದ್ರ ನಾಯರಿ ಅವರು ನೇಮಕವಾಗಿದ್ದಾರೆ. ಚೆನ್ನೈನಲ್ಲಿ ಮೊನ್ನೆ ನಡೆದ ಯೂನಿಯನ್‌ನ ಕೇಂದ್ರ ಸಮಿತಿ ಸಭೆಯಲ್ಲಿ ಈ ನೇಮಕ ಮಾಡಲಾಗಿದೆ ಎಂದು ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷ ಎಂ.ಎಸ್.ಶ್ರೀನಿವಾಸನ್ ತಿಳಿಸಿದ್ದಾರೆ.








ದಾವಣಗೆರೆ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ನಮ್ಮೆಲ್ಲರ ಬೆಂಬಲ



ಆರೋಗ್ಯ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸುತ್ತಿರುವ ದಾವಣಗೆರೆ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ

ಡಾ|| ಪ್ರಭಾ ಮಲ್ಲಿಕಾರ್ಜುವನ್‌ರವರು

ನಮ್ಮೆಲ್ಲರ ಸಹಕಾರ, ಬೆಂಬಲದೊಂದಿಗೆ ಜಯಶೀಲರಾಗಲೆಂದು ಶುಭ ಹಾರೈಸುತ್ತೇವೆ...

ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಂಘದ ಎಲ್ಲಾ ಸದಸ್ಯರುಗಳು

ಗ್ಯಾರೇಜ್ ವರ್ಕ್ ಶಾಪ್ ಮಾಲೀಕರು ಹಾಗೂ ಕಾರ್ಮಿಕ ಸಂಘ, ದಾವಣಗೆರೆ.



ಆನಂದ್ ವಸತಿ ಗೃಹ ಉದ್ಘಾಟನೆ



ಆನಂದ್ ವಸತಿ ಗೃಹದ ಉದ್ಘಾಟನಾ ಸಮಾರಂಭವನ್ನು 3.05.2024ರ ಶುಕ್ರವಾರ ಅಶೋಕ ರಸ್ತೆಯಲ್ಲಿ ಹೊಸದಾಗಿ ನವೀಕರಿಸಲಾದ

ಆನಂದ್ ಲಾಡ್ಜ್‌ನಲ್ಲಿ

ಕೈಗೆಟುಕುವ ದರದಲ್ಲಿ ಹೋಟೆಲ್ ಕೊಠಡಿಗಳು ಲಭ್ಯವಿವೆ. ಸಿಂಗಲ್ ಬೆಡ್ ರೂಮ್‌ಗಳು, ಡಬಲ್ ಬೆಡ್ ರೂಮ್‌ಗಳು, ಡೀಲಕ್ಸ್ ಎಸಿ ರೂಮ್‌ಗಳು ವ್ಯಾಪಾರದ ತಂಗುವಿಕೆಗಳಿಗೆ ಸೂಕ್ತವಾಗಿರುತ್ತದೆ ಮತ್ತು ದೀರ್ಘಾವಧಿಯ ತಂಗುವಿಕೆಗಳು ಕಡಿಮೆ ಬೆಲೆಯಲ್ಲಿ ಲಭ್ಯವಿವೆ.

ಸೌಲಭ್ಯಗಳು
- ಏಕ ಮಲಗುವ ಕೋಣೆಗಳು
- ಡಬಲ್ ಮಲಗುವ ಕೋಣೆಗಳು
- ಟ್ರಿಪಲ್ ಮಲಗುವ ಕೋಣೆಗಳು
- ಎಸಿ ಕೊಠಡಿಗಳು
- ಬಿಸಿನೀರಿನ ಪೂರೈಕೆ
- ಪವರ್ ಬ್ಯಾಕಪ್
- ಲಿಫ್ಟ್ ನಿಬಂಧನೆ

ಬುಕ್ಕಿಂಗ್‌ಗಾಗಿ ಸಂಪರ್ಕಿಸಿ.
ಫೋ. : 08192-468743
ವಾಟ್ಸ್ಯಾಪ್ ನಂ.
ಮೊ : 9110466412



ಕೈಲಾಸ ಸಮಾರಾಧನೆ



ಪವನಕುಮಾರ ಆರ್.ವಿ

ಜನನ : 20-04-1998 ಮರಣ : 30-04-2024

" ಕೈಲಾಸ ಸಮಾರಾಧನೆ "

ಮೊ : 9141860201, 8453447217



ಪ್ರಥಮ ವರ್ಷದ ಪುಣ್ಯಸ್ಮರಣೆ



ದಿವಂಗತ ವಿ.ಎಸ್. ಶ್ರೀ ಅರುಣಾಚಲ ಶ್ರೇಷ್ಠಿ

(ನಿಧನ : 3-5-2023)

ಅಧ್ಯಕ್ಷರು
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರೀಹಳ್ಳಿ,
ಸಂಸ್ಥಾಪಕ ಅಧ್ಯಕ್ಷರು
ವಾಸವಿ ಕ್ಲಬ್
ಇಂಟರ್ ನ್ಯಾಷನಲ್, ದಾವಣಗೆರೆ.

ಸ್ಥಾಪಕರಲ್ಲೊಬ್ಬರು :
ಆರ್ಯವೈಶ್ಯ ಮಹಾಜನ ಸಮಿತಿ, ಕುಂದುವಾಡ ಕೆರೆ ರಸ್ತೆ, ದಾವಣಗೆರೆ.
ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ, ಡಿಸಿಎಂ ಟೌನ್ ಶಿಪ್, ದಾವಣಗೆರೆ.
ಶ್ರೀ ವಾಸವಿ ಅಭಿವೃದ್ಧಿ ಸಹಕಾರ ಸಂಘ, ಪಿ.ಜೆ.ಬಡಾವಣೆ, ದಾವಣಗೆರೆ.

ಆತ್ಮೀಯರು, ಖ್ಯಾತ ಲೆಕ್ಕಪರಿಶೋಧಕರು, ಆರ್ಯವೈಶ್ಯ ಪ್ರಮುಖರಾಗಿದ್ದ ತಾವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಗಿದ್ದು ಭಗವಂತನು ತಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ...

ದಿವಂಗತ ಬಿ. ತಿಮ್ಮರಾಯಶ್ರೇಷ್ಠಿ, ಕುಟುಂಬ ವರ್ಗದವರು, ಬಿ.ಟಿ. ಅಶ್ವತ್ ಮತ್ತು ಸಹೋದರರು, ಚೌಕೀಪೇಟೆ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas